# ಕೇರಳ ಪಾಠಾವಳಿ
# KERALA READER

# ಕನ್ನಡ
# KANNADA

## ತರಗತಿ

## IV

## ಭಾಗ - 2

ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

ತಯಾರಕರು
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT)
ವಿದ್ಯಾಭವನ ಪೂಜಪ್ಪುರ, ತಿರುವನಂತಪುರ - 695 012

2025

## ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠ
ದ್ರಾವಿಡ ಉತ್ಕಲ ವಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗ
ತವಶುಭ ನಾಮೇ ಜಾಗೇ
ತವಶುಭ ಆಶಿಷ ಮಾಗೇ
ಗಾಹೇ ತವಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯಹೇ

## ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆ ಪಡುತ್ತೇನೆ.

ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ. ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.

ನಾನು ನನ್ನ ದೇಶ ಮತ್ತು ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅವರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

Kannada - IV (Part 2)

---

Prepared by :
**State Council of Educational Research and Training (SCERT)**
Poojapura, Thiruvananthapuram - 695012 Kerala
website : scertkerala.gov.in. Email : scertkerala@gmail.com.
Phone : 0471-2341883. Fax : 0471-2341869
Typeset designed by : SCERT
First Edition : 2025
Printed at : KBPS Kakkanad, Kochi
© Department of General Education, Govt. of Kerala.

# ಮುನ್ನುಡಿ

ಪ್ರೀತಿಯ ವಿದ್ಯಾರ್ಥಿಗಳೇ,

ಭಾಷೆ ಕೇವಲ ಸಂವಹನದ ಮಾಧ್ಯಮವಲ್ಲ. ಅದು ನಮ್ಮ ಕಣ್ಣಿಗೆ ಸರಿಸಮವಾಗಿದೆ. ನಾವು ದಿನನಿತ್ಯ ಕಲಿಯುವ ಭಾಷೆಯಲ್ಲಿ, ಅದರಲ್ಲೂ ಮಾತೃಭಾಷೆಯಲ್ಲಿ ಮಾತನಾಡಲು, ಓದಲು ಮತ್ತು ಬರೆಯಲು ಕೇವಲ ಮೂಲಭೂತ ಭಾಷಾ ಕೌಶಲ್ಯಗಳಿದ್ದರೆ ಮಾತ್ರ ಸಾಕಾಗುವುದಿಲ್ಲ.

ಭಾಷೆಯ ಪ್ರಮುಖ ಶಕ್ತಿಯೆಂದರೆ ಅದು ನಮ್ಮನ್ನು ಕಲ್ಪನೆಯ ಕ್ಷೇತ್ರದಿಂದ ಆಚೆಗೆ ಕೊಂಡೊಯ್ಯಬಲ್ಲುದು. ಸೃಜನಶೀಲ ವಿದ್ಯಾರ್ಥಿಗಳಿಗೆ ಭಾಷಾ ಶಿಕ್ಷಣ ಪ್ರೇರಕ ಶಕ್ತಿಯಾಗುತ್ತದೆ. ಕೆಲವರ ಭಾಷಾ ಶೈಲಿಯೇ ಅವರನ್ನು ಪ್ರತ್ಯೇಕವಾಗಿ ಗುರುತಿಸುವಂತೆ ಮಾಡುತ್ತದೆ. ನಾವೂ ನಮ್ಮದೇ ಆದ ಭಾಷೆಯನ್ನು ಬೆಳೆಸಿಕೊಳ್ಳುವುದನ್ನು ಕಲಿಯಬೇಕು.

ಪಠ್ಯಪುಸ್ತಕವು ಮುದ್ರಿತ ಪತ್ರಿಕೆಗಳ ಸಂಗ್ರಹವಲ್ಲ; ಅದರಲ್ಲಿ ಉತ್ತಮ ಶಿಕ್ಷಕರು, ವಿಜ್ಞಾನಿಗಳು ಮತ್ತು ತತ್ವಜ್ಞಾನಿಗಳು ಅಡಗಿರುತ್ತಾರೆ. ಪಠ್ಯಪುಸ್ತಕಗಳು ನಮ್ಮ ಬದುಕಿಗೆ ಮಾರ್ಗದರ್ಶಕವಾಗಿರುತ್ತವೆ, ಒಬ್ಬರಿಗೊಬ್ಬರು ಬೆರೆಯುವ ಗೆಳೆಯರಂತೆ ಇರುತ್ತವೆ, ಹಿತೈಷಿಗಳಂತೆ ಇರುತ್ತವೆ ಎನ್ನಬಹುದು. ಪಠ್ಯಪುಸ್ತಕವು ನಮಗೆ ಉಪಯುಕ್ತವಾಗಬೇಕು, ನಾವು ಸೇರಿರುವ ಸಮಾಜದ ಸುಖ-ದುಃಖಗಳಲ್ಲಿ ಭಾಗವಹಿಸುವಂತೆ ಮಾಡಬೇಕು ಮತ್ತು ನಾವು ವಾಸಿಸುವ ದೇಶದ ಅಭಿವೃದ್ಧಿಯಲ್ಲಿ ಭಾಗವಹಿಸಲು ಪ್ರೋತ್ಸಾಹಿಸಬೇಕು. ಎಲ್ಲಕ್ಕಿಂತ ಹೆಚ್ಚಾಗಿ ಉತ್ತಮ ಶಿಕ್ಷಕರ ಸಹಾಯದಿಂದ ನಮ್ಮ ಜ್ಞಾನವನ್ನು ಬೆಳೆಸಿಕೊಳ್ಳಲು ಅವು ಸಹಾಯ ಮಾಡಬೇಕು. ಸುದೃಢ, ಸ್ವಸ್ಥ ಸಮಾಜ ನಿರ್ಮಾಣಕ್ಕೆ ಪಠ್ಯಪುಸ್ತಕವು ಸಹಕಾರಿಯಾಗಬೇಕು. ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಈ ಪಠ್ಯಪುಸ್ತಕವನ್ನು ರೂಪಿಸಲಾಗಿದೆ.

ಭಾಷಾ ಪಠ್ಯಪುಸ್ತಕವು ನಿಮ್ಮ ಚಿಂತನೆಯನ್ನು ಶ್ರೀಮಂತಗೊಳಿಸಲಿ.

ಅಭಿನಂದನೆಗಳು,

**ಡಾ. ಜಯಪ್ರಕಾಶ್ ಆರ್.ಕೆ.**
ನಿರ್ದೇಶಕರು,
ಎಸ್.ಸಿ.ಇ.ಆರ್.ಟಿ., ಕೇರಳ

ತಿರುವನಂತಪುರ

# TEXT BOOK DEVELOPMENT COMMITTEE

## KANNADA IV - PART 2

**Advisor**

| | |
|---|---|
| Shivashankara P. | Asst. Professor, GPM College, Manjeshwar. |

**Chairperson**

| | |
|---|---|
| Dr. Vedavathi | Asst. Professor, Government College, Kasaragod. |

**Expert**

| | |
|---|---|
| Rama Bhat | Professor (Rtd), Government College, Kasaragod. |
| Padmanabha Poojari | Professor (Rtd), Government College, Kasaragod. |
| Yatheesh Kumar Rai K. | Principal (Rtd), GHSS Belluru |

**Participants**

| | |
|---|---|
| Balakrishna P. | HM (Rtd), GLPS Kunjathur. |
| Srikumary K. | HM (Rtd), AUPS Anekal. |
| Jyothi N. | HM, GLPS Kannur. |
| Seema Suvarna | HM, GBLPS Ujarulwar. |
| Shivarama A. | LPST, SSPALPS Udayagiri. |
| Anil Kumar U. | LPST, GWLPS Bela. |
| Ashok Kumar | LPST, GLPS Badaje. |

**Artist**

| | |
|---|---|
| Satheesh | Drawing Teacher, BRC Kumbla. |

**Academic Co-ordinator**

Dr. Sahaya Dhas D.
Research Officer, SCERT, Thiruvananthapuram.

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT)
ವಿದ್ಯಾಭವನ, ಪೂಜಪ್ಪುರ, ತಿರುವನಂತಪುರ - 695 012

# ಅನುಕ್ರಮಣಿಕೆ


| ಕ್ರಮಸಂಖ್ಯೆ | ಘಟಕ | ಪುಟ ಸಂಖ್ಯೆ |
|---|---|---|
| 5. | **ಬೆಳಕಿನೆಡೆಗೆ** | 7 - 20 |
| | 1. ಸರ್ವಜ್ಞನ ವಚನಗಳು | |
| | 2. ಪೇಚಿಗೆ ಬಿದ್ದ ಜಿಪುಣ | |
| | 3. ಉಡುಗೊರೆ | |
| 6. | **ಆರೋಗ್ಯ ಸಿರಿ** | 21 - 38 |
| | 1. ಆಟದ ಮೋಜು | |
| | 2. ಒಲಿಂಪಿಕ್ಸ್ | |
| | 3. ಸೋಮಾರಿ ಗುಂಡ | |
| 7. | **ದುಡಿಯೋಣ ಉಣ್ಣೋಣ** | 39 - 52 |
| | 1. ಗಳಿಕೆಯೊಡನೆ ಕಲಿಕೆ | |
| | 2. ಕರಕುಶಲ ಬದುಕು | |
| 8. | **ನಾಡಿಗಾಗಿ** | 53 - 64 |
| | 1. ಸ್ಕೌಟ್ ಗೈಡ್ ಚಳುವಳಿ | |
| | 2. ಈ ಮಣ್ಣು ನಮ್ಮದು | |
| | 3. ಮೇರಿಕ್ಯೂರಿ | |

# ಭಾರತದ ಸಂವಿಧಾನ

## ಪ್ರಸ್ತಾವನೆ

ಭಾರತದ ಜನತೆಯಾದ ನಾವು,
ಭಾರತವನ್ನು ಸಾರ್ವಭೌಮ, ಸಮಾಜವಾದಿ, ಧರ್ಮನಿರಪೇಕ್ಷ
ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ
ರೂಪಿಸುವುದಕ್ಕಾಗಿ;
ಭಾರತದ ಎಲ್ಲಾ ಪ್ರಜೆಗಳಿಗೆ
ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು;
ವಿಚಾರ, ಅಭಿವ್ಯಕ್ತಿ, ನಂಬಿಕೆ, ಧರ್ಮ ಮತ್ತು
ಉಪಾಸನೆಯ ಸ್ವಾತಂತ್ರ್ಯವನ್ನು;
ಸ್ಥಾನಮಾನ ಮತ್ತು ಅವಕಾಶಗಳ ಸಮಾನತೆಯನ್ನು
ದೊರೆಯುವಂತೆ ಮಾಡುವುದಕ್ಕಾಗಿ;
ವ್ಯಕ್ತಿಗೌರವ, ದೇಶದ ಏಕತೆ ಮತ್ತು ಸಮಗ್ರತೆಗಾಗಿ ಎಲ್ಲರಲ್ಲಿ
ಭ್ರಾತೃತ್ವ ಭಾವನೆಯನ್ನು ಮೂಡಿಸುವುದಕ್ಕೆ
ದೃಢಸಂಕಲ್ಪ ಮಾಡಿ,
ನಮ್ಮ ಸಂವಿಧಾನ ಸಭೆಯಲ್ಲಿ
1949ನೆಯ ಇಸವಿಯ ನವೆಂಬರ್ ತಿಂಗಳ 26ನೇ ದಿನದಂದು
ಈ ಸಂವಿಧಾನವನ್ನು ನಮಗೆ ನಾವೇ ಅರ್ಪಿಸಿಕೊಂಡು
ಅಂಗೀಕರಿಸಿ,
ಶಾಸನವಾಗಿ ವಿಧಿಸಿಕೊಂಡಿದ್ದೇವೆ.

# 5. ಬೆಳಕಿನೆಡೆಗೆ

ಶಿಕ್ಷಣವು ಮೌಲ್ಯಾಧಾರಿತವಾಗಿರಬೇಕು. ಪ್ರಾಮಾಣಿಕತೆ, ಸತ್ಯನಿಷ್ಠೆ, ಪರಸ್ಪರ ಗೌರವ, ಉತ್ತಮ ನಾಗರಿಕತೆ ಇತ್ಯಾದಿ ಹಲವಾರು ನೈತಿಕ ಮೌಲ್ಯಗಳನ್ನು ನಾವು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಇಲ್ಲಿ ನೀಡಿರುವ ಪಾಠಭಾಗದಲ್ಲಿ ಸತ್ಯನಿಷ್ಠೆ, ಪ್ರಾಮಾಣಿಕತೆ, ಪ್ರಾಣಿದಯೆ ಎಂಬೀ ಮೌಲ್ಯಗಳನ್ನೊಳಗೊಂಡ ವಚನಗಳು, ಕಥೆ, ಆತ್ಮಕಥೆ ಮೊದಲಾದ ಭಾಷಾ ಪ್ರಕಾರಗಳಿವೆ. ಇಂತಹ ಮೌಲ್ಯಗಳನ್ನು ಅರಿತು ನಮ್ಮ ಜೀವನದಲ್ಲಿ ಪಾಲಿಸುವ ಮೂಲಕ ಉತ್ತಮ ಸಮಾಜದ ಸೃಷ್ಟಿಗೆ ಪ್ರಯತ್ನಿಸೋಣ.

**ಗೋಪಾಲಕೃಷ್ಣ ಗೋಖಲೆಯವರ ಜೀವನದಲ್ಲಿ ನಡೆದ ಒಂದು ಘಟನೆಯ ಚಿತ್ರಗಳನ್ನು ನೋಡಿರಿ. ಘಟನೆಯನ್ನು ಬರೆಯಿರಿ.**



..........................................................................................

..........................................................................................

..........................................................................................



..........................................................................................

..........................................................................................

..........................................................................................



..........................................................................................

..........................................................................................

..........................................................................................



..........................................................................................

..........................................................................................

..........................................................................................

# ಸರ್ವಜ್ಞನ ವಚನಗಳು



ಸಜ್ಜನರ ಸಂಗವದು | ಹೆಜ್ಜೇನು ಸವಿದಂತೆ |
ದುರ್ಜನರ ಸಂಗವದು ಬಚ್ಚಲ |
ರೊಚ್ಚಿನಂತಿಹುದು |ಸರ್ವಜ್ಞ

ಕೊಟ್ಟಿದ್ದು ತನಗೆ | ಬಚ್ಚಿಟ್ಟದ್ದು ಪರರಿಂಗೆ |
ಕೊಟ್ಟಿದ್ದು ಕೆಟ್ಟಿತೆನಬೇಡ ಮುಂದಕ್ಕೆ |
ಕಟ್ಟಿಹುದು ಬುತ್ತಿ | ಸರ್ವಜ್ಞ

ಜಾತಿಹೀನನ ಮನೆಯ | ಜ್ಯೋತಿ ತಾ ಹೀನವೇ |
ಜಾತಿ ವಿಜಾತಿಯೆನಬೇಡ ದೇವನೊಲಿ |
ದಾತನೇ ಜಾತ |ಸರ್ವಜ್ಞ

ನಡೆವುದೊಂದೇ ಭೂಮಿ| ಕುಡಿವುದೊಂದೇ ನೀರು |
ಸುಡುವಗ್ನಿಯೊಂದೆ ಇರುತಿರಲು ಕುಲಗೋತ್ರ |
ನಡುವೆ ಎತ್ತಣದು? |ಸರ್ವಜ್ಞ

ಸರ್ವಜ್ಞನ ವಚನಗಳು ಜನಪ್ರಿಯವಾಗಿದ್ದು, ಸರ್ವಕಾಲಕ್ಕೂ ಅನ್ವಯವಾಗುವಂತಹ ಸತ್ಯವನ್ನು ಸಾರುವಂತಿದೆ. ಆದುದರಿಂದಲೇ ವಚನಗಳು ಜನಸಾಮಾನ್ಯರ ಮನಸ್ಸಿನಾಳದಲ್ಲಿ ತಳವೂರಿ ನಿಂತಿದೆ. ಸರ್ವಜ್ಞನ ವಚನಗಳು ಮೂರು ಸಾಲುಗಳಿಂದ ಕೂಡಿದ್ದು ಅದನ್ನು ತ್ರಿಪದಿ ಎಂದು ಕರೆಯುತ್ತಾರೆ.

## ಚಟುವಟಿಕೆಗಳು

**ಕೊಟ್ಟಿರುವ ವಚನಗಳನ್ನು ಹಾಡಿರಿ.**

### ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.

1. ಸಜ್ಜನರ ಸಂಗವು ಹೇಗಿರುತ್ತದೆ?
2. ಬಚ್ಚಿಟ್ಟದ್ದು ಯಾರಿಗೆ ಹೋಗುವುದೆಂದು ಸರ್ವಜ್ಞ ಹೇಳುತ್ತಾನೆ?
3. ಸರ್ವಜ್ಞನು ಯಾರನ್ನು ಜಾತನೆಂದು ಹೇಳುವನು?
4. ಕುಲಗೋತ್ರ ಎತ್ತಣದು ಎಂದು ಸರ್ವಜ್ಞ ಹೇಳಲು ಕಾರಣವೇನು?

### ಹೊಂದಿಸಿ ಬರೆಯಿರಿ.

- ದುರ್ಜನರ ಸಂಗವದು ಬಚ್ಚಲ ರೊಚ್ಚಿನಂತಿಹುದು
- ಕೊಟ್ಟಿದ್ದು ತನಗೆ ಬಚ್ಚಿಟ್ಟದ್ದು ಪರರಿಗೆ
- ನಡೆವುದೊಂದೇ ಭೂಮಿ ಕುಡಿವುದೊಂದೇ ನೀರು
- ಜಾತಿ ವಿಜಾತಿ ಎನಬೇಡ

- ಎಲ್ಲರೂ ನಡೆಯುವ ಭೂಮಿ ಒಂದೇ, ಕುಡಿಯುವ ನೀರು ಒಂದೇ.
- ತನ್ನ ಜಾತಿ, ಇತರರ ಜಾತಿ ಎಂಬ ಭಾವನೆ ಬೇಡ
- ಕೆಟ್ಟವರ ಸಹವಾಸ ಬಚ್ಚಲು ಮನೆಯ ಕೊಳಕು ನೀರಿನಂತೆ ಇರುವುದು
- ಇತರರಿಗೆ ನೀಡುವುದರ ಫಲವು ಮುಂದೆ ನಮಗೆ ಲಭಿಸುವುದು. ತೆಗೆದಿರಿಸಿದ್ದು ಇನ್ನೊಬ್ಬರ ಪಾಲಾಗುವುದು

### ಬಿಟ್ಟ ಸ್ಥಳವನ್ನು ಭರ್ತಿಮಾಡಿರಿ.

- ಕೆಟ್ಟಿತೆನಬೇಡ = .................... + ಎನಬೇಡ
- ವಿಜಾತಿಯೆನಬೇಡ = .................. + ಎನಬೇಡ
- ದೇವನೊಲಿದಾತ = .................... + ಒಲಿದಾತ
- ನಡೆವುದೊಂದೇ = ...................... + ಒಂದೇ
- ಕುಡಿವುದೊಂದೇ = ........................ + ಒಂದೇ

## ಪರ್ಯಾಯ ಪದ ಬರೆಯಿರಿ.

ಕೆಳಗಿನ ಪದಗಳಿಗೆ ಶಬ್ದಕೋಶದಿಂದ ಪರ್ಯಾಯ ಪದ ಕಂಡುಹಿಡಿದು ಬರೆಯಿರಿ.

- ನೀರು
- ಬೆಂಕಿ
- ಜ್ಯೋತಿ
- ಭೂಮಿ

## ಕನ್ನಡ ಅಂಕೆಗಳನ್ನು ಬರೆಯೋಣ.

ಕೆಳಗೆ ಕೊಟ್ಟಿರುವ ಕನ್ನಡ ಅಂಕೆಗಳ ಸಹಾಯದಿಂದ ಉಳಿದ ಸಂಖ್ಯೆಗಳ ಕನ್ನಡ ಸಂಖ್ಯೆಗಳನ್ನು ಬರೆಯಿರಿ.

| | |
|---|---|
| ೧ - 1 | ೬ - 6 |
| ೨ - 2 | ೭ - 7 |
| ೩ - 3 | ೮ - 8 |
| ೪ - 4 | ೯ - 9 |
| ೫ - 5 | ೧೦ - 10 |

| | |
|---|---|
| 13 - .............. | 57 - .............. |
| 41 - .............. | 98 - .............. |
| 63 - .............. | 76 - .............. |
| 22 - .............. | 82 - .............. |
| 37 - .............. | 54 - .............. |

# ಪೇಚಿಗೆ ಬಿದ್ದ ಜಿಪುಣ

ಕಾಂಚಿಪಟ್ಟಣದಲ್ಲಿ ಕೇಶವರಾಯ ಎಂಬ ಒಬ್ಬ ವ್ಯಾಪಾರಿ ಇದ್ದನು. ಅವನು ಶ್ರೀಮಂತನಾಗಿದ್ದನು. ಆದರೆ ಇನ್ನೂ ಹೆಚ್ಚು ಹಣವನ್ನು ಗಳಿಸಬೇಕೆಂಬ ಆಸೆ ಅವನಿಗಿತ್ತು. ಒಮ್ಮೆ ಅವನು ವ್ಯಾಪಾರಕ್ಕಾಗಿ ಪಟ್ಟಣಕ್ಕೆ ಹೋದನು. ಅಲ್ಲಿ ತನ್ನ ಸರಕುಗಳನ್ನೆಲ್ಲಾ ಮಾರಿದನು. ಅಲ್ಲಿಂದ ಸಿಕ್ಕಿದ್ದೆಲ್ಲವೂ ಚಿನ್ನದ ನಾಣ್ಯಗಳಾಗಿದ್ದವು. ಸರಕು ಮಾರಿ ಬಂದ ಚಿನ್ನದ ನಾಣ್ಯಗಳನ್ನೆಲ್ಲ ಒಂದು ಚಿಕ್ಕ ಚೀಲದಲ್ಲಿ ಹಾಕಿಕೊಂಡು, ಚೀಲವನ್ನು ಜೇಬಿನಲ್ಲಿ ಇಟ್ಟುಕೊಂಡು ಕುದುರೆಯ ಮೇಲೆ ಸಂಜೆ ಮನೆಗೆ ಬಂದನು. ಚೀಲದಲ್ಲಿರುವ ನಾಣ್ಯಗಳನ್ನು ಎಣಿಸಿ ತಿಜೋರಿಯಲ್ಲಿ ಇಡಬೇಕೆಂದು ಯೋಚಿಸಿ, ಹಣದ ಚೀಲಕ್ಕಾಗಿ ಜೇಬಿನಲ್ಲಿ ಕೈಯಾಡಿಸಿದನು. ಆದರೆ ಹಣದ ಚೀಲ ಇರಲಿಲ್ಲ. ಇನ್ನೊಂದು ಜೇಬಿನೊಳಗೆ ಕೈಹಾಕಿ ನೋಡಿದನು. ಅದರಲ್ಲೂ ಇರಲಿಲ್ಲ. ಎದೆ ಧಸಕ್ಕೆಂದಿತು. "ಚೀಲದಲ್ಲಿರುವ ಐದುನೂರು ನಾಣ್ಯಗಳು ಕಳೆದು ಹೋದುವಲ್ಲ" ಎಂದು ಮರುಗಿದನು.



ಮರುದಿನ ಬೆಳಗ್ಗೆ ರಾಜನಲ್ಲಿಗೆ ಹೋದನು. "ಸ್ವಾಮೀ, ನಿನ್ನೆ ವ್ಯಾಪಾರ ಮುಗಿಸಿ ಊರಿಗೆ ಬರುವಾಗ ನನ್ನ ಜೇಬಿನಲ್ಲಿದ್ದ ಐದುನೂರು ಚಿನ್ನದ ನಾಣ್ಯಗಳ ಚೀಲವು ಎಲ್ಲೋ ಕಳೆದುಹೋಗಿದೆ. ಅದು ಯಾರಿಗಾದರೂ ಸಿಕ್ಕಿದರೆ, ತಂದು ಕೊಟ್ಟವರಿಗೆ ನಾನು ಐವತ್ತು ಚಿನ್ನದ ನಾಣ್ಯಗಳನ್ನು ಬಹುಮಾನವಾಗಿ ಕೊಡುತ್ತೇನೆ" ಎಂದು ವಿನಂತಿ ಮಾಡಿಕೊಂಡನು. ರಾಜನು "ಹಾಗೆಯೇ ಆಗಲಿ" ಎಂದು ಹೇಳಿ ಸೇವಕರನ್ನು ಕರೆದು ಊರಿನಲ್ಲೆಲ್ಲ ಡಂಗುರ ಸಾರಿಸಿದನು.

ಕಾಂಚಿಪಟ್ಟಣದಲ್ಲಿ ದೇವಮ್ಮ ಎಂಬ ಮುದುಕಿ ತನ್ನ ಮಗಳೊಂದಿಗೆ ವಾಸಿಸುತ್ತಿದ್ದಳು. ಅವಳು ತುಂಬಾ ಬಡವಿ. ಅವರಿವರ ಮನೆಯಲ್ಲಿ ಕೂಲಿ ಕೆಲಸಮಾಡಿ ಜೀವನ ಸಾಗಿಸುತ್ತಿದ್ದಳು.

ದೇವಮ್ಮ ಎಂದಿನಂತೆ ಸಂಜೆ ಕೆಲಸ ಮುಗಿಸಿ ಮನೆಗೆ ಹಿಂತಿರುಗುವಾಗ ಅವಳಿಗೆ ಚಿನ್ನದ ನಾಣ್ಯಗಳ ಚೀಲ ಸಿಕ್ಕಿತು. ಯಾರದೋ ಕೈಯಿಂದ ಬಿದ್ದಿರಬೇಕು. ಇದನ್ನು ಅವರಿಗೆ ತಲುಪಿಸಬೇಕು ಎಂದು ಯೋಚಿಸುತ್ತಾ ರಾತ್ರಿಯನ್ನು ಕಳೆದಳು. ಮರುದಿನ ರಾಜನ ಸೈನಿಕರು ಡಂಗುರ ಸಾರುವುದನ್ನು ಕೇಳಿದಳು. ಅವಳು ಹಣದ ಚೀಲದೊಂದಿಗೆ ನೇರವಾಗಿ ರಾಜನ ಬಳಿಗೆ ಹೋದಳು. ಚೀಲವನ್ನು ರಾಜನಿಗೆ ಒಪ್ಪಿಸಿದಳು. ರಾಜನಿಗೆ ಮುದುಕಿಯ ಒಳ್ಳೆಯ ಗುಣವನ್ನು ನೋಡಿ ಸಂತೋಷವಾಯಿತು. ರಾಜನು ಕೇಶವರಾಯನನ್ನು ಕರೆಸಿ ಹಣದ ಚೀಲವನ್ನು ನೀಡಿದನು. ಆತ ಹಣವನ್ನು ಎಣಿಸಿದನು. ಸರಿಯಾಗಿ ಐನೂರು ಚಿನ್ನದ ನಾಣ್ಯಗಳಿದ್ದವು. ಈಗ ತಾನು ಹೇಳಿದಂತೆ ಐವತ್ತು ನಾಣ್ಯಗಳನ್ನು ಬಹುಮಾನವಾಗಿ ಕೊಡಬೇಕಲ್ಲ ಎಂದು ಅವನಿಗೆ ಚಿಂತೆಯಾಯಿತು. ತಟ್ಟನೆ ಅವನಿಗೆ ಒಂದು ಉಪಾಯ ಹೊಳೆಯಿತು. ಅವನು ರಾಜನೊಡನೆ, "ಸ್ವಾಮಿ ನನ್ನ ಚೀಲದಲ್ಲಿ ಐನೂರು ಚಿನ್ನದ ನಾಣ್ಯಗಳ ಜೊತೆಗೆ ಐವತ್ತು ಬೆಳ್ಳಿಯ ನಾಣ್ಯಗಳೂ ಇದ್ದವು. ಮೊದಲೇ ಹೇಳಲು ಮರೆತು ಹೋಯಿತು. ಬೆಳ್ಳಿಯ ನಾಣ್ಯಗಳನ್ನು ಮುದುಕಿ ತೆಗೆದುಕೊಂಡಿರಬೇಕು. ಅದನ್ನು ಅವಳು ಬಹುಮಾನವಾಗಿ ಇಟ್ಟುಕೊಳ್ಳಲಿ" ಎಂದನು. ಕೂಡಲೇ ಮುದುಕಿಯು "ಸ್ವಾಮೀ, ಚೀಲವನ್ನು ಹಾಗೆಯೇ ತಂದುಕೊಟ್ಟಿದ್ದೇನೆ. ನಾನು ಏನನ್ನೂ ತೆಗೆದುಕೊಂಡಿಲ್ಲ. ನನಗೆ ಯಾವ ಬಹುಮಾನವೂ ಬೇಡ" ಎಂದಳು. ಕೇಶವರಾಯ ಸುಳ್ಳು ಹೇಳುತ್ತಿದ್ದಾನೆಂದು ರಾಜನಿಗೆ ತಿಳಿಯಿತು. ರಾಜನಿಗೆ ಅವನ ಮೇಲೆ ಸಿಟ್ಟು ಬಂದಿತು. ಇವನಿಗೆ ಬುದ್ಧಿ ಕಲಿಸಬೇಕು ಎಂದುಕೊಂಡ. "ನಿನ್ನ ಚೀಲದಲ್ಲಿ ಒಟ್ಟು ಐನೂರ ಐವತ್ತು ನಾಣ್ಯಗಳು ಇದ್ದುವಲ್ಲವೆ? ಇದರಲ್ಲಿ ಐನೂರು ನಾಣ್ಯಗಳು ಮಾತ್ರ ಇವೆ. ಆದ್ದರಿಂದ ಈ ಚೀಲ ನಿನ್ನದಲ್ಲ. ನಮ್ಮದೇ ಇರಬೇಕು. ನಿನ್ನದು

ಸಿಕ್ಕರೆ ಹೇಳಿ ಕಳಿಸುತ್ತೇನೆ. ಆಗ ಬಾ. ಇದನ್ನು ನಾನು ಈ ಮುದುಕಿಗೆ ಬಹುಮಾನವಾಗಿ ಕೊಡುತ್ತೇನೆ" ಹೀಗೆ ಹೇಳಿ ರಾಜನು ಐನೂರು ನಾಣ್ಯಗಳನ್ನು ಮುದುಕಿಗೆ ಕೊಟ್ಟನು. ಅವಳು ಸಂತೋಷದಿಂದ ಮನೆಗೆ ಹೋದಳು. "ನಾನು ಅತಿ ಆಸೆಯಿಂದ ಎಲ್ಲವನ್ನೂ ಕಳೆದುಕೊಂಡೆನಲ್ಲ" ಎಂದು ದುಃಖದಿಂದ ಕೇಶವರಾಯ ಮನೆಗೆ ಮರಳಿದನು.

ಪ್ರಸಿದ್ಧ ಜಾದೂಗಾರರೂ, ಚಲನಚಿತ್ರ ನಿರ್ದೇಶಕರೂ ಆದ ಕೆ. ಎಸ್. ರಮೇಶ್ ರವರು ಮೈಸೂರಿನ ಕುವೆಂಪು ನಗರದವರು. ಇವರ ಕಥಾಸಂಕಲನದಿಂದ ಈ ಕಥೆಯನ್ನು ಆಯ್ದುಕೊಳ್ಳಲಾಗಿದೆ.

## ಚಟುವಟಿಕೆಗಳು

**ಉತ್ತರ ಬರೆಯಿರಿ.**

1. ಕೇಶವರಾಯನ ಎದೆ ಧಸಕ್ಕೆನ್ನಲು ಕಾರಣವೇನು?
2. ಕಳೆದು ಹೋದ ಚಿನ್ನದ ನಾಣ್ಯಗಳ ಚೀಲ ಯಾರ ಕೈಗೆ ಸಿಕ್ಕಿತು?
3. ಚಿನ್ನದ ನಾಣ್ಯಗಳಿರುವ ಚೀಲವನ್ನು ತಂದುಕೊಟ್ಟವರಿಗೆ ಏನನ್ನು ಬಹುಮಾನವಾಗಿ ನೀಡುತ್ತೇನೆಂದು ವ್ಯಾಪಾರಿ ಹೇಳಿದನು?
4. ರಾಜನಿಗೆ ಕೇಶವರಾಯನ ಮೇಲೆ ಸಿಟ್ಟುಬರಲು ಕಾರಣವೇನು?
5. ಕೇಶವರಾಯ ದುಃಖದಿಂದ ಮನೆಗೆ ಮರಳಲು ಕಾರಣವೇನು??

**ಈ ಕಥೆಯಲ್ಲಿ ನಿಮಗೆ ಇಷ್ಟವಾದ ಕಥಾಪಾತ್ರ ಯಾವುದು? ಯಾಕೆ?**

**ವಿರೋಧಾರ್ಥ ಪದ ಬರೆಯಿರಿ.**

- ಶ್ರೀಮಂತ
- ಆಸೆ
- ಸುಳ್ಳು
- ಸಂತೋಷ

### ಪ್ರಶ್ನೆ ತಯಾರಿಸಿರಿ

ಕಥೆಯನ್ನು ಓದಿದಿರಲ್ಲವೇ? ಇದರಿಂದ ನಿಮಗೆ ಇಷ್ಟವಿರುವ ಮೂರು ಪ್ರಶ್ನೆಗಳನ್ನು ತಯಾರಿಸಿರಿ.

- 
- 
- 

**ಈ ಕಥೆಗೆ ಹೊಂದಿಕೆಯಾಗುವ ಗಾದೆ ಮಾತುಗಳನ್ನು ಬರೆಯಿರಿ.**

ಉದಾ : ಅತಿ ಆಸೆ ಗತಿಗೇಡು

- 
- 
- 

**ಪಾಠಭಾಗದಿಂದ ಸಜಾತಿಯ ಒತ್ತಕ್ಷರಗಳಿರುವ ಪದಗಳನ್ನು ಆರಿಸಿ ಬರೆಯಿರಿ.**

| ನ್ನ | ಕ್ಕ | ಟ್ಟ | ಳ್ಳ |
|---|---|---|---|
| | | | |

**ಇದೇ ರೀತಿ ಸಜಾತಿಯ ಒತ್ತಕ್ಷರಗಳಿರುವ ಇತರ ಪದಗಳನ್ನು ಸಂಗ್ರಹಿಸಿ ಕೊಟ್ಟಿರುವ ಕೋಣೆಯಲ್ಲಿ ಬರೆಯಿರಿ.**

# ಪ್ರಾಮಾಣಿಕತೆ

ಜೂಹಿ ನಾಲ್ಕನೇ ತರಗತಿಯ ವಿದ್ಯಾರ್ಥಿನಿ. ಒಮ್ಮೆ ಅವಳು ಅಮ್ಮನೊಂದಿಗೆ ಬಸ್ಸಿನಲ್ಲಿ ಕಾಸರಗೋಡಿಗೆ ಪ್ರಯಾಣಿಸುತ್ತಿದ್ದಳು. "ಟಿಕೆಟ್, ಟಿಕೆಟ್" "ನೀವು ಎಲ್ಲಿಗೆ, ಎಷ್ಟು ಟಿಕೆಟ್?" ಎಂದು ಕಂಡಕ್ಟರ್ ಕೇಳಿದನು. "ನನಗೆ ಕಾಸರಗೋಡಿಗೆ ಒಂದು ಟಿಕೆಟ್ ಕೊಡಿ" ಅಮ್ಮ ಹೇಳಿದರು. "ಈ ಮಗುವಿಗೆ ಟಿಕೆಟ್ ಮಾಡಬೇಕು" ಕಂಡಕ್ಟರ್ ಹೇಳಿದನು. "ಅವಳಿಗೆ ಟಿಕೆಟ್ ಬೇಡ." ಅಮ್ಮ ಹೇಳಿದರು. "ಅವಳು ಯಾವ ತರಗತಿಯಲ್ಲಿ ಕಲಿಯುತ್ತಿದ್ದಾಳೆ?" "ಒಂದನೇ ತರಗತಿಯಲ್ಲಿ" ಅಮ್ಮ ಹೇಳಿದರು. ಅಮ್ಮ ಮತ್ತು ಕಂಡಕ್ಟರ್ ನಡುವೆ ನಡೆದ ಸಂಭಾಷಣೆಯನ್ನು ಜೂಹಿ ಗಮನಿಸುತ್ತಿದ್ದಳು. ಅವಳಿಗೆ ಅಮ್ಮನಲ್ಲಿ ಕೋಪ ಬಂತು. "ಅಮ್ಮಾ, ನೀನು ಕಂಡಕ್ಟರಲ್ಲಿ ಯಾಕೆ ಸುಳ್ಳು ಹೇಳಿದೆ? ಸುಳ್ಳು ಹೇಳುವುದು ತಪ್ಪಲ್ಲವೇ? ಕಂಡಕ್ಟರ್ ಮಾಮ, ನಾನು ನಾಲ್ಕನೇ ತರಗತಿಯಲ್ಲಿ ಕಲಿಯುತ್ತಿದ್ದೇನೆ. ನನಗೂ ಟಿಕೆಟ್ ಕೊಡಿ" ಎಂದಳು. ಕಂಡಕ್ಟರ್ ನಗುತ್ತಾ ಟಿಕೆಟ್ ಕೊಟ್ಟನು. ಪ್ರಯಾಣಿಕರೆಲ್ಲರೂ ಜೂಹಿಯ ಪ್ರಾಮಾಣಿಕತೆಯನ್ನು ಮೆಚ್ಚಿಕೊಂಡರು.

**ಮೇಲಿನ ಗದ್ಯಭಾಗವನ್ನು ಓದಿ ಸಂಭಾಷಣಾ ರೂಪದಲ್ಲಿ ಬರೆಯಿರಿ.**

# ಉಡುಗೊರೆ



ಈ ಘಟನೆಯನ್ನು ನಾನು ಅನೇಕ ಬಾರಿ ಹೇಳಿದ್ದೇನೆ. ಆದ್ದರಿಂದ ಇಲ್ಲಿ ಸಂಕ್ಷಿಪ್ತವಾಗಿ ಹೇಳುತ್ತೇನೆ. ನಾನು ಸಣ್ಣ ಹುಡುಗನಾಗಿದ್ದಾಗ ನನ್ನ ತಂದೆ ಜನಾಬ್ ಅವುಲ್ ಪಕೀರ್ ಜೈನುಲಬ್ದೀನ್ ಅವರು ನನಗೆ ಒಂದು ಪಾಠ ಕಲಿಸಿದರು. ಅದು ನಡೆದದ್ದು 1947ರಲ್ಲಿ ಭಾರತವು ಸ್ವಾತಂತ್ರ್ಯ ಪಡೆದ ಸಮಯದಲ್ಲಿ. ರಾಮೇಶ್ವರ ದ್ವೀಪದಲ್ಲಿ ಪಂಚಾಯಿತಿ ಚುನಾವಣೆ ನಡೆದು ನನ್ನ ತಂದೆ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಚುನಾಯಿತರಾದರು. ನನ್ನ ತಂದೆ ಚುನಾಯಿತರಾದದ್ದು ಯಾವುದೇ ಒಂದು ಧರ್ಮಕ್ಕೆ ಅಥವಾ ಜಾತಿಗೆ ಸೇರಿದವರು ಎಂಬುದಕ್ಕಾಗಲಿ ಅವರ ಹಣಕಾಸಿನ ಸ್ಥಿತಿಗತಿಗಳಿಗಾಗಲಿ ಅಲ್ಲ. ಬದಲಾಗಿ ಅವರೊಬ್ಬ ಒಳ್ಳೆಯ ಮನುಷ್ಯ, ತಿಳುವಳಿಕೆ ಉಳ್ಳವರು, ವಿವೇಕಿ. ಆದ ಕಾರಣ ಅವರು ಚುನಾಯಿತರಾದರು.

ನನ್ನ ತಂದೆ ಅಧ್ಯಕ್ಷನಾಗಿ ಚುನಾಯಿತರಾದ ದಿವಸ ಒಬ್ಬರು ನಮ್ಮ ಮನೆಗೆ ಬಂದರು. ನಾನು ಶಾಲೆಗೆ ಹೋಗುವ ಹುಡುಗನಾಗಿದ್ದೆನು. ಅವರು ಬಂದಾಗ ನಾನು ಮನೆಯೊಳಗೆ ಪಾಠಗಳನ್ನು ಗಟ್ಟಿಯಾಗಿ ಓದುತ್ತಾ ಕುಳಿತಿದ್ದೆನು. ಅವರು ಬಾಗಿಲು ತಟ್ಟಿದರು. ಆಗಿನ ಕಾಲದಲ್ಲಿ ನಮ್ಮ ರಾಮೇಶ್ವರದಲ್ಲಿ ಬಾಗಿಲಿಗೆ ಅಗಳಿ ಹಾಕುವ ಸಂಪ್ರದಾಯ ಇರಲಿಲ್ಲ. ಆ ವ್ಯಕ್ತಿ ಒಳಗೆ ಬಂದು ನನ್ನೊಡನೆ "ತಂದೆ ಎಲ್ಲಿ?" ಎಂದು ಕೇಳಿದರು. "ತಂದೆ ಸಾಯಂಕಾಲದ ನಮಾಜಿಗೆ ಹೋಗಿದ್ದಾರೆ" ನಾನು ಹೇಳಿದೆನು. "ನಿನ್ನ ತಂದೆಗೆ ಕೊಡಲು ಇದನ್ನು ತಂದಿರುವೆನು. ಇದನ್ನು ಇಲ್ಲಿ ಇಟ್ಟು ಹೋಗಬಹುದೇ" ಎಂದು ಕೇಳಿದರು. ಅದನ್ನು ಮಂಚದ ಮೇಲೆ ಇರಿಸಬಹುದೆಂದು ನಾನು ಅವರಿಗೆ ಹೇಳಿದೆನು.

ನನ್ನ ತಂದೆ ವಾಪಾಸು ಬಂದಾಗ ಮಂಚದಲ್ಲಿ ಬೆಳ್ಳಿಯ ತಟ್ಟೆಯೊಂದರಲ್ಲಿ ಕೆಲವು ಉಡುಗೊರೆ ವಸ್ತುಗಳು ಇರುವುದನ್ನು ನೋಡಿದರು. "ಇದನ್ನು ಯಾರು ಕೊಟ್ಟರು?" ಎಂದು ತಂದೆ ನನ್ನಲ್ಲಿ ಕೇಳಿದರು. "ಯಾರೋ ಒಬ್ಬರು ಬಂದು ಅದನ್ನು ನಿಮಗೆಂದು ಇಟ್ಟುಹೋದರು" ಎಂದು ನಾನು ಉತ್ತರಿಸಿದೆನು. ತಂದೆ ಆ ಪೊಟ್ಟಣವನ್ನು ತೆರೆದರು. ಅದರಲ್ಲಿ ಬೆಲೆಬಾಳುವ ಬಟ್ಟೆ ಬರೆ, ಕೆಲವು ಬೆಳ್ಳಿ ಕಪ್‌ಗಳು ಹಾಗೂ ಹಣ್ಣುಗಳು, ಸಿಹಿ ತಿಂಡಿ ಇತ್ಯಾದಿ ಇದ್ದುವು. ಆ ಉಡುಗೊರೆ ವಸ್ತುಗಳನ್ನು ನೋಡಿ ತಂದೆಯು ಕೋಪದಿಂದ ಉರಿದು ಹೋದರು. ಮನೆಯಲ್ಲಿ ನಾನೇ ಕೊನೆಯ ಮಗ. ನನ್ನ ತಂದೆ ನನ್ನನ್ನು ತುಂಬಾ ಪ್ರೀತಿಸುತ್ತಿದ್ದರು. ನಾನೂ ಅವರನ್ನು ಪ್ರೀತಿಸುತ್ತಿದ್ದೆನು. ಅವರು ಕೋಪಗೊಂಡದ್ದನ್ನು ನಾನು ನೋಡಿದ್ದು ಅದೇ ಮೊದಲ ಬಾರಿ. ಅಂದು ಮೊದಲ ಬಾರಿ ನಾನು ಅವರಿಂದ ಏಟುಗಳನ್ನು ತಿಂದೆನು. ನಾನು ಬಹಳ ಭಯ ಪಟ್ಟೆನು. ಅಳಲು ತೊಡಗಿದೆನು. ತಂದೆ ನಂತರ ಸಮಾಧಾನ ತಂದುಕೊಂಡು ನನ್ನನ್ನು ಸಾಂತ್ವನಗೊಳಿಸಿ ಮುಂದೆ ಯಾರಿಂದಲೂ, ಒಪ್ಪಿಗೆಯಿಲ್ಲದೆ ಉಡುಗೊರೆಗಳನ್ನು ತೆಗೆದುಕೊಳ್ಳಬಾರದೆಂದು ಹೇಳಿದರು. ಅವರು ಒಂದು ಹದೀಸ್‌ನ್ನು ಹೇಳಿದರು. "ದೇವರು ಒಬ್ಬ ವ್ಯಕ್ತಿಯನ್ನು ಒಂದು ಹುದ್ದೆಗೆ ನೇಮಿಸಿದರೆ, ಅವನಿಗೆ ಬೇಕಾದ ಎಲ್ಲಾ ವಸ್ತುಗಳನ್ನೂ ದೇವರೇ ಕೊಡುವನು. ಅದನ್ನೂ ಮೀರಿ ಯಾರಾದರೂ ಏನನ್ನಾದರೂ ಪಡೆದರೆ ಅದು ಅಕ್ರಮ ಗಳಿಕೆ ಆಗುತ್ತದೆ. ಉಡುಗೊರೆ ತೆಗೆದುಕೊಳ್ಳುವುದು ಒಳ್ಳೆಯ ಹವ್ಯಾಸವಲ್ಲ. ಯಾವುದೇ ಉಡುಗೊರೆಯ ಹಿಂದೆ ಏನಾದರೊಂದು ಉದ್ದೇಶ ಇರುತ್ತದೆ. ಆದುದರಿಂದ ಅದು ಅಪಾಯಕಾರಿ. ಅದು ಹಾವನ್ನು ಮುಟ್ಟಿ ಕಚ್ಚಿಸಿಕೊಂಡಂತೆ" ಎಂದು ತಂದೆ ಹೇಳಿದರು.

ನಾನು ಈಗ ಎಂಭತ್ತರ ಪ್ರಾಯದಲ್ಲಿ ಇರುವಾಗಲೂ ತಂದೆಯ ಈ ಪಾಠ ನನ್ನ ನೆನಪಿನಲ್ಲಿ ಹಸಿರಾಗಿದೆ. ಈಗಲೂ ಯಾರಾದರೂ ಉಡುಗೊರೆ ಸಹಿತ ನನ್ನ ಮುಂದೆ ನಿಂತಾಗ ನನ್ನ ಮನಸ್ಸು ಮತ್ತು ಶರೀರ ನಡುಗಲು ತೊಡಗುತ್ತದೆ.

"ಉಡುಗೊರೆ" ಎಂಬ ಈ ಆತ್ಮಕಥೆಯನ್ನು ಎ.ಪಿ.ಜೆ. ಅಬ್ದುಲ್ ಕಲಾಂ ಅವರ "ಟರ್ನಿಂಗ್ ಪಾಯಿಂಟ್ಸ್" ಎಂಬ ಪುಸ್ತಕದಿಂದ ಆಯ್ಕೆ ಮಾಡಲಾಗಿದೆ. ಡಾ.ಕಲಾಂ ಅವರು ತಮ್ಮ ಜೀವನದಲ್ಲಿ ನಡೆದ ಒಂದು ಘಟನೆಯನ್ನು ಇದರಲ್ಲಿ ಮನೋಹರವಾಗಿ ವಿವರಿಸಿದ್ದಾರೆ.

## ಚಟುವಟಿಕೆಗಳು

### ಉತ್ತರ ಬರೆಯಿರಿ

1. ಡಾ.ಕಲಾಂ ಅವರ ತಂದೆಯ ಹೆಸರೇನು?
2. ಡಾ.ಕಲಾಂರವರ ತಂದೆಯವರು ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಚುನಾಯಿತರಾದುದು ಎಲ್ಲಿ?
3. ಡಾ. ಅಬ್ದುಲ್ ಕಲಾಂ ಅವರ ತಂದೆಯು ಅಧ್ಯಕ್ಷರಾಗಿ ಚುನಾಯಿತರಾಗಲು ಪ್ರಧಾನ ಕಾರಣವೇನು?
4. ಮಂಚದಲ್ಲಿ ಇಟ್ಟಿದ್ದ ಬೆಳ್ಳಿಯ ತಟ್ಟೆಯಲ್ಲಿ ಯಾವ ಯಾವ ವಸ್ತುಗಳು ಇದ್ದುವು?
5. ಡಾ.ಕಲಾಂ ಅವರ ತಂದೆಯವರು ಹೇಳಿದ "ಹದೀಸ್" ಏನು?

### ಪಾಠಭಾಗವನ್ನು ಓದಿ ಬಿಟ್ಟ ಸ್ಥಳವನ್ನು ತುಂಬಿಸಿರಿ.

- ತಂದೆ ....................................... ಅಧ್ಯಕ್ಷರಾಗಿ ಚುನಾಯಿತರಾದರು.
- ನಾನು ಮನೆಯೊಳಗೆ ....................................... ಕುಳಿತಿದ್ದೆನು.
- ಬೆಳ್ಳಿಯ ತಟ್ಟೆಯೊಂದರಲ್ಲಿ ಕೆಲವು ....................................... ಇರುವುದನ್ನು ನೋಡಿದರು.
- ಉಡುಗೊರೆ ವಸ್ತುಗಳನ್ನು ನೋಡಿ ತಂದೆಯು ....................................... ಉರಿದು ಹೋದರು.
- ಉಡುಗೊರೆ ತೆಗೆದುಕೊಳ್ಳುವುದು ....................................... ಹವ್ಯಾಸವಲ್ಲ.

### ಕೆಳಗಿನ ಪದಗಳನ್ನು ಬಳಸಿ ಸ್ವಂತ ವಾಕ್ಯಗಳನ್ನು ಬರೆಯಿರಿ.

- ಸಾಯಂಕಾಲ
- ಸಮಾಧಾನ
- ಕೋಪದಿಂದ
- ಉಡುಗೊರೆ
- ಭಯ

**ಪಾಠಭಾಗದಲ್ಲಿ ವಿಜಾತಿಯ ಒತ್ತಕ್ಷರಗಳಿರುವ ಪದಗಳನ್ನು ಆರಿಸಿ ಬರೆಯಿರಿ.**

| ಯ | ವ | ತ | ರ | ನ |
|---|---|---|---|---|
| ್ಯ | ್ವ | ್ತ | ್ರ | ್ನ |
| | | | | |

**ಇದೇ ರೀತಿಯಲ್ಲಿ ವಿಜಾತಿಯ ಒತ್ತಕ್ಷರಗಳಿರುವ ಇತರ ಪದಗಳನ್ನು ಸಂಗ್ರಹಿಸಿ ಬರೆಯಿರಿ.**

**ಕೆಳಗಿನ ಪದಗಳನ್ನು ಬಳಸಿ ಸಾಧ್ಯವಿರುವಷ್ಟು ವಾಕ್ಯಗಳನ್ನು ಬರೆಯಿರಿ.**

ಅವನು ಅಂಗಡಿಗೆ

ಮನೆಗೆ ಹೋದರು ಅವಳು

ಹೋದಳು ಹೋದನು ಬಂದನು

ಅವರು ಬಂದಳು ಬಂದರು

ಜಾತ್ರೆಗೆ

## ದಿನಚರಿ ಬರೆಯಿರಿ

ಈ ಪಾಠಭಾಗದಲ್ಲಿ ಡಾ.ಕಲಾಂ ಅವರ ಜೀವನದಲ್ಲಿ ನಡೆದ ಒಂದು ಘಟನೆಯನ್ನು ಅವರು ಸ್ವತಃ ವಿವರಿಸಿದ್ದಾರೆ. ಇದೇ ರೀತಿಯಲ್ಲಿ ನಿಮ್ಮ ಜೀವನದಲ್ಲಿಯೂ ಇಂತಹ ಸಣ್ಣಪುಟ್ಟ ಘಟನೆಗಳು ನಡೆದಿರಬಹುದು. ಅವುಗಳಲ್ಲಿ ಒಂದನ್ನು ದಿನಚರಿಯ ರೂಪದಲ್ಲಿ ಬರೆಯಿರಿ.

# ಕಲಿಕಾ ಕಣಜ



| ಕಲಿಕೋಪಕರಣಗಳು / ವೇದಿಕೆಗಳು | ಚಟುವಟಿಕೆಗಳು |
|---|---|
| ನೋಟು ಪುಸ್ತಕ | ಪ್ರವೇಶ ಚಟುವಟಿಕೆ, ಉತ್ತರಿಸಿರಿ, ಹೊಂದಿಸಿ ಬರೆಯಿರಿ, ಬಿಟ್ಟ ಸ್ಥಳವನ್ನು ಭರ್ತಿಮಾಡಿರಿ, ಪರ್ಯಾಯ ಪದ, ಕನ್ನಡ ಅಂಕೆಗಳು, ಇಷ್ಟವಾದ ಕಥಾಪಾತ್ರ, ಗಾದೆಮಾತುಗಳು, ವಿರೋಧಾರ್ಥ ಪದ, ಪ್ರಶ್ನೆ ತಯಾರಿಸಿರಿ, ಸಜಾತಿಯ - ವಿಜಾತಿಯ ಪದಗಳು, ಸಂಭಾಷಣೆ, ಸ್ವಂತ ವಾಕ್ಯದಲ್ಲಿ ಬರೆಯಿರಿ, ವಾಕ್ಯ ರಚಿಸಿರಿ, ದಿನಚರಿ ಬರೆಯಿರಿ |
| ಪಠ್ಯಪುಸ್ತಕ | ಪ್ರವೇಶ ಚಟುವಟಿಕೆ, ಹೊಂದಿಸಿ ಬರೆಯಿರಿ, ಬಿಟ್ಟ ಸ್ಥಳವನ್ನು ಭರ್ತಿಮಾಡಿರಿ, ಪರ್ಯಾಯ ಪದ, ಕನ್ನಡ ಅಂಕೆಗಳು, ವಿರೋಧಾರ್ಥ ಪದ, ಪ್ರಶ್ನೆ ತಯಾರಿಸಿರಿ, ಸಂಭಾಷಣೆ, ಪಾಠಭಾಗದ ಓದು |
| ದೃಶ್ಯಶ್ರಾವ್ಯ ಮಾಧ್ಯಮ | ವಚನಗಳು, ಆತ್ಮಕಥೆ, ಕತೆ |
| ಭಿತ್ತಿಪತ್ರಿಕೆ | ರಚನೆಗಳು |
| ಪೋರ್ಟ್ ಫೋಲಿಯೋ | ರಚನೆಗಳು |
| ಬಾಲಸಭೆ / ಶಾಲಾ ಎಸೆಂಬ್ಲಿ / ಸಿ.ಪಿ.ಟಿ.ಎ. | ಪದ್ಯ, ಕತೆ |

# 6. ಆರೋಗ್ಯ ಸಿರಿ

ಎಲ್ಲಾ ಸುಖ ಸೌಭಾಗ್ಯಗಳಲ್ಲಿಯೂ ಆರೋಗ್ಯ ಭಾಗ್ಯವು ಶ್ರೇಷ್ಠವಾದುದಾಗಿದೆ. ಸದೃಢವಾದ ಶರೀರದಲ್ಲಿ ಸದೃಢವಾದ ಮನಸ್ಸಿರುತ್ತದೆ. ಆರೋಗ್ಯದಿಂದಿರಲು ಎಲ್ಲರೂ ಬಯಸುತ್ತಾರೆ. ಆದರೆ ಆರೋಗ್ಯದ ಕಡೆಗೆ ಗಮನಹರಿಸುವುದಿಲ್ಲ. ಸರಿಯಾದ ವ್ಯಾಯಾಮ, ಆಟಗಳು, ಯೋಗ ಇತ್ಯಾದಿಗಳಿಂದ ಶಾರೀರಿಕ ಮತ್ತು ಮಾನಸಿಕ ಕ್ಷಮತೆಯನ್ನು ಹೆಚ್ಚಿಸಬಹುದು.

ಆಟಗಳೆಂದರೆ ಮಕ್ಕಳಿಗೆ ಹಿಗ್ಗು. ಯುವಕರಿಗೆ ಉತ್ಸಾಹ ಮತ್ತು ಹಿರಿಯರಿಗೆ ಸಂತೋಷ. ಆಟಗಳನ್ನು ಆಡಿ, ನೋಡಿ, ಕೇಳಿ ಆನಂದಿಸದ ಮನುಷ್ಯ ಇರಲಾರ. ಮಕ್ಕಳಲ್ಲಿ, ತರುಣರಲ್ಲಿ ಆರೋಗ್ಯ, ಶಿಸ್ತು, ಪರಸ್ಪರ ಸಹಕಾರ ಮನೋಭಾವವನ್ನು ಬೆಳೆಸುವಲ್ಲಿ ಆಟಗಳು ಸಹಕಾರಿಯಾಗಿವೆ. ಸಂಪೂರ್ಣ ಆರೋಗ್ಯವನ್ನು ಗಳಿಸುವುದರಲ್ಲೂ ಅದನ್ನು ನೆಲೆನಿಲ್ಲಿಸುವುದರಲ್ಲೂ ಕ್ರೀಡೆಗಳ ಪಾತ್ರವು ಹಿರಿದಾಗಿದೆ.

**ಈ ಕೆಳಗಿನ ಕ್ರೀಡಾಪಟುಗಳನ್ನು ಗುರುತಿಸಿ ಬರೆಯಿರಿ.**




- ................................................
- ................................................
- ................................................
- ................................................
- ................................................
- ................................................

# ಆಟದ ಮೋಜು



ಬನ್ನಿರಿ ಗೆಳೆಯರೆ ಬನ್ನಿರಿ ನಾವು
ಆಟವನಾಡೋಣ
ಲಗ್ಗೆ ಚೆಂಡು ಚಿನ್ನಿಯ ದಾಂಡು
ಯಾವುದನಾಡೋಣ.

ಕಪ್ಪೆಯ ಹಾಗೆ ಕುಪ್ಪಳಿಸುತ್ತಾ
ಕುಣಿಯುತ ಜಿಗಿಯೋಣ
ಕಬಡ್ಡಿ ಆಟ ಖೋ ಖೋ ಆಟ
ಯಾವುದನಾಡೋಣ.

ಗೋಲಿ ಆಟ ಆಡಲು ನಾವು
ಒಟ್ಟಿಗೆ ಸೇರೋಣ.
ಬುಗರಿ ಬಿಟ್ಟು ತಿರುಗುವ ಗುಟ್ಟು.
ನೋಡುತ ನಲಿಯೋಣ.

ಕಣ್ಣಾಮುಚ್ಚೇ, ಕಾಡೇ ಗೂಡೇ
ಆಟವನಾಡೋಣ
ಚಂದ್ರನ ನೋಡಿ ಬೆಳದಿಂಗಳಲಿ
ಓಡಿಯೇ ಓಡೋಣ

ಎಲ್ಲರೂ ಸೇರಿ ಈ ಸಂಜೆಯನು
ನಗುತಲಿ ಕಳೆಯೋಣ
ಆಟದ ಜತೆಗೆ ಪಾಠವು ಬೇಕು
ಓದಲು ಹೋಗೋಣ.

ದಿನವೂ ಸಂಜೆ ಆಟವ ಆಡಿ
ಬೇಸರ ಕಳೆಯೋಣ
ಬನ್ನಿರಿ ಗೆಳೆಯರೆ ನಾಳೆ ಎಲ್ಲರೂ
ಇಲ್ಲಿ ಸೇರೋಣ.

**ವಿಮಲಾ ಇನಾಂದಾರ್**

ವಿಮಲಾ ಇನಾಂದಾರ್‌ರವರು ಹಲವಾರು ಸಾಹಿತ್ಯ ಪ್ರಕಾರಗಳಲ್ಲಿ ರಚನೆ ಮಾಡಿರುವ ಪ್ರತಿಭಾವಂತರು. ಅವರ ಸಾಹಿತ್ಯ ಕ್ಷೇತ್ರದ ಸಾಧನೆಗಾಗಿ ಕಿತ್ತೂರು ಚೆನ್ನಮ್ಮ ರಾಜ್ಯಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.

## ಚಟುವಟಿಕೆಗಳು

### ಹಾಡುವ

"ಆಟದ ಮೋಜು" ಪದ್ಯವನ್ನು ರಾಗವಾಗಿ ಹಾಡಿರಿ.

### ಉತ್ತರ ಬರೆಯಿರಿ

1. ಈ ಪದ್ಯದಲ್ಲಿ ಯಾವ ಯಾವ ಆಟಗಳ ಬಗ್ಗೆ ಹೇಳಲಾಗಿದೆ?
2. ಯಾವ ಜೀವಿಯ ಹಾಗೆ ಕುಪ್ಪಳಿಸುತ್ತಾ ಸಾಗಲು ಮಗುವಿಗೆ ಇಷ್ಟ?
3. ಬೇಸರ ಕಳೆಯಲು ಆಟದಿಂದ ಸಾಧ್ಯವೆಂದು ತಿಳಿಸುವ ಸಾಲು ಯಾವುದು?
4. ಆಟದ ಜೊತೆಯಲ್ಲಿ ಬೇರೆ ಏನು ಬೇಕೆಂದು ಮಕ್ಕಳು ಆಶಿಸುತ್ತಾರೆ?

### ಪದಗಳ ಅರ್ಥ ಕಂಡುಹಿಡಿಯುವ

ಪದ್ಯ ಭಾಗದಲ್ಲಿ ಬರುವ ನವೀನ ಪದಗಳನ್ನು ಹುಡುಕಿ ಬರೆಯಿರಿ. ಅವುಗಳ ಅರ್ಥವನ್ನು ಕಂಡುಹಿಡಿದು ಬರೆಯಿರಿ. (ಕುಪ್ಪಳಿಸು, ಜಿಗಿಯು ....,.....)

### ಆಟಗಳನ್ನು ಗುರುತಿಸುವ

ನಿಮಗೆ ಗೊತ್ತಿರುವ ಆಟಗಳ ಹೆಸರನ್ನು ಬರೆಯಿರಿ.

- ..........................
- ..........................
- ..........................
- ..........................
- ..........................
- ..........................

### ಇಷ್ಟವಾದ ಸಾಲು

ಈ ಪದ್ಯದಲ್ಲಿ ಇಷ್ಟವಾದ ಸಾಲುಗಳು ಯಾವುವು? ಯಾಕೆ ಇಷ್ಟವಾಯಿತು? ಎಂದು ಬರೆಯಿರಿ.

### ಆಶಯ ಬರೆಯುವ

ಆಟದ ಮೋಜು ಪದ್ಯವನ್ನು ಓದಿದಿರಲ್ಲವೇ? ಪದ್ಯದ ಆಶಯವನ್ನು ಬರೆಯಿರಿ.

### ಪದ್ಯ ಮುಂದುವರಿಸುವ

ಕೆಳಗೆ ನೀಡಲಾದ ಪದ್ಯದ ಸಾಲುಗಳನ್ನು ಮುಂದುವರಿಸಿ ಬರೆಯಿರಿ.

ಆಟದ ಜತೆಯಲಿ
ಪಾಠವು ಸಾಗಿದೆ
ನಮ್ಮಯ ಶಾಲೆಯಲಿ

..................................
..................................
..................................

..................................
..................................
..................................

### ಟಿಪ್ಪಣಿ ತಯಾರಿಸಿರಿ

ಆಟಗಳನ್ನು ಆಡುವುದರಿಂದಾಗುವ ಪ್ರಯೋಜನಗಳ ಬಗ್ಗೆ ಟಿಪ್ಪಣಿ ತಯಾರಿಸಿರಿ.

# ಚೆನ್ನೆಮಣೆ



ಚೆನ್ನೆಮಣೆ ಒಂದು ಬಗೆಯ ಒಳಾಂಗಣ ಆಟ. ಮಕ್ಕಳು, ಹಿರಿಯರು ಎಲ್ಲರೂ ಆಡಬಹುದಾದ ಖುಷಿ ನೀಡುವ ಆಟ ಇದಾಗಿದೆ. ಹಿಂದಿನ ಕಾಲದಲ್ಲಿ ಎಲ್ಲಾ ಮನೆಗಳಲ್ಲೂ ಚೆನ್ನೆಮಣೆಯನ್ನು ಕಾಣಬಹುದಾಗಿತ್ತು. ಇದೊಂದು ಮರದ ಆಟಿಕೆ. ಇದರ ಎರಡು ಬದಿಗಳಲ್ಲೂ ಸಾಲಾಗಿ ಏಳರಂತೆ ಗುಳಿಗಳಿವೆ. ಮಂಜಟ್ಟಿಕಾಯಿ ಈ ಆಟದ ಪ್ರಧಾನ ವಸ್ತು. ಇಬ್ಬರು ಆಟಗಾರರು ಆಟದ ಮಣೆಯನ್ನು ಮಧ್ಯದಲ್ಲಿರಿಸಿ ಎರಡೂ ಬದಿಯಲ್ಲಿ ಕುಳಿತುಕೊಳ್ಳಬೇಕು. ಒಬ್ಬ ಆಟಗಾರನಿಗೆ ಒಂದು ಬದಿಯ ಏಳು ಗುಳಿಗಳು. ಪ್ರತಿಯೊಂದು ಗುಳಿಗಳಿಗೂ ನಾಲ್ಕರಂತೆ ಮಂಜಟ್ಟಿಕಾಯಿ ಮೊದಲೇ ಹಾಕಿಡಬೇಕು.

ಇನ್ನು ಆಟ ಆರಂಭ. ಒಬ್ಬ ಆಟಗಾರ ತನ್ನ ಪಾಲಿನ ಯಾವುದಾದರೂ ಒಂದು ಗುಳಿಯಿಂದ ಕಾಯಿಗಳನ್ನು ಬಾಚಿ ಮುಂದಿನ ಒಂದೊಂದು ಗುಳಿಗೂ ಒಂದೊಂದು ಕಾಯಿಯನ್ನು ಹಾಕಬೇಕು. ಕೈಯಲ್ಲಿದ್ದ ಕಾಯಿಗಳು ಖಾಲಿಯಾದಂತೆ ಮುಂದಿನ ಗುಳಿಯ ಕಾಯಿಗಳನ್ನು ತೆಗೆದು ಒಂದೊಂದಾಗಿ ಮುಂದಿನ ಗುಳಿಗಳಿಗೆ ಹಾಕಬೇಕು. ಕೊನೆಯ ಗುಳಿಗೆ ಹಾಕಿದ ನಂತರ ಮುಂದಿನ ಗುಳಿ ಖಾಲಿ ಇದ್ದಲ್ಲಿ ಅದರ ಮುಂದಿನ ಗುಳಿಯ ಕಾಯಿಗಳನ್ನು ಆಟಗಾರ ಬಾಚಿ ತೆಗೆಯಬಹುದು. ಹೀಗೆ ಸರತಿಯ ಪ್ರಕಾರ ಆಡುವುದು. ಹೀಗೆ ಎಲ್ಲಾ ಕಾಯಿಗಳು ಮುಗಿಯುವ ತನಕ ಆಟ ಮುಂದುವರಿಸಿ, ಕೊನೆಯಲ್ಲಿ ಯಾರ ಕೈಯಲ್ಲಿ ಹೆಚ್ಚು ಕಾಯಿಗಳಿರುವುದೋ ಅವರು ಆಟದಲ್ಲಿ ಗೆಲ್ಲುತ್ತಾರೆ. ಇದು ಆಟದ ಒಂದು ರೀತಿ. ಚೆನ್ನೆಮಣೆ ಆಟಗಳಲ್ಲಿ ಹಲವು ರೀತಿಯ ಆಟಗಳೂ ಇವೆ.

**ಆರೋಗ್ಯಕ್ಕೆ ಸಂಬಂಧಿಸಿದ ಗಾದೆಮಾತುಗಳನ್ನು ಸಂಗ್ರಹಿಸಿ ಬರೆಯಿರಿ.**

- ಅತಿಯಾದರೆ ಅಮೃತವೂ ವಿಷ.
- ಹಸಿದು ಉಣ್ಣಬೇಕು, ದಣಿದು ಮಲಗಬೇಕು.
- ಊಟ ಬಲ್ಲವನಿಗೆ ರೋಗವಿಲ್ಲ, ಮಾತು ಬಲ್ಲವನಿಗೆ ಜಗಳವಿಲ್ಲ.

## ಹಾಡಿರಿ

ಪದ್ಯವನ್ನು ಹಾಡಿ ಆಸ್ವಾದಿಸಿರಿ.

# ಹಲ್ಲು ತಪಾಸಣೆ

ವೈದ್ಯರು ಬಂದರು
ಶಾಲೆಯ ಒಳಗೆ
ಮಕ್ಕಳ ಹಲ್ಲು ತಪಾಸಣೆಗೆ||
ಹಲ್ಲನು ನೋಡದೆ
ಮಕ್ಕಳ ಜೇಬಲಿ
ಏನುಂಟೆಂದು ಹುಡುಕಿದರು||



ಒಬ್ಬನ ಜೇಬಲಿ
ಚಾಕಲೇಟ್ ಸಿಕ್ಕರೆ
ಪುಟಾಣಿ ಮಿಠಾಯಿ ಮತ್ತೊಬ್ಬನಲಿ||
ಬೆಂಡು ಬತ್ತಾಸು
ಒಬ್ಬನದಾದರೆ
ಕಡಲೆ ಶೇಂಗಾ ಇನ್ನೊಬ್ಬನದು||
ತಿನಿಸನು ತಿಂದ
ಎಲ್ಲರ ಹಲ್ಲನು
ವೈದ್ಯರು ತೆರೆದು ನೋಡಿದರು||
ಹಲ್ಲಿಗೆ ಹುಳುಕು
ಒಸಡಿಗೆ ರಕ್ತ
ವಾಸನೆ ಇದ್ದವು ಅವುಗಳಲಿ||



ಹುಳುಕೇ ಇಲ್ಲದ
ವೈದ್ಯರ ಹಲ್ಗಳು
ಹೊಳೆಯುತಲಿದ್ದವು ಲಕಲಕನೆ||

- ಹೆಚ್.ಕೆ. ಆವಟಿ






# ಒಲಿಂಪಿಕ್ಸ್





ಒಂದು ದೇಶದ ಉತ್ತಮ ಆಟಗಾರರು ಭಾಗವಹಿಸುವ ಅನೇಕ ಪಂದ್ಯಾಟಗಳಿವೆ. ಇದೇ ರೀತಿಯಲ್ಲಿ ಪ್ರಪಂಚದ ಬೇರೆ ಬೇರೆ ದೇಶದ ಕ್ರೀಡಾಪಟುಗಳು ಭಾಗವಹಿಸಬಹುದಾದ ಒಂದು ಅಂತಾರಾಷ್ಟ್ರೀಯ ಕ್ರೀಡೋತ್ಸವವು ನಡೆಯುವುದು. ಈ ಕ್ರೀಡೋತ್ಸವವೇ ಒಲಿಂಪಿಕ್ ಕ್ರೀಡೋತ್ಸವ ಎಂದು ಜಗತ್ತಿನಲ್ಲಿ ಹೆಸರು ಪಡೆದಿದೆ.





ಒಲಿಂಪಿಕ್ ಕ್ರೀಡೆಗಳು ಗ್ರೀಸ್ ದೇಶದ ಎಲ್ಲೀಸ ಕಣಿವೆಯಲ್ಲಿರುವ ಒಲಿಂಪಿಯಾ ಎಂಬ ಬಯಲಿನಲ್ಲಿ ಮೊಟ್ಟಮೊದಲು ನಡೆದುದರಿಂದ ಇವುಗಳಿಗೆ ಒಲಿಂಪಿಕ್ ಕ್ರೀಡೆಗಳೆಂದು ಹೆಸರು ಬಂದಿತು. ಮೊದಲು ಈ ಕ್ರೀಡೆಯು ನಾಲ್ಕು ವರ್ಷಗಳಿಗೊಮ್ಮೆ ಬಯಲಿನಲ್ಲಿ ನಡೆಯುತ್ತಿದ್ದುವು. ಆಟಗಳಲ್ಲದೆ ಕವಿತೆ ಮತ್ತು ನಾಟಕ ಸ್ಪರ್ಧೆಗಳು ಜರಗುತ್ತಿದ್ದುವು.





ಗ್ರೀಕ್ ದೇಶವು ಈಗಿನಂತೆ ಒಂದು ದೇಶ ವಾಗಿರಲಿಲ್ಲ. ಅದು ಹಲವು ಸಣ್ಣ ರಾಜ್ಯಗಳಿಂದ ಕೂಡಿದ್ದಾಗಿತ್ತು.









ಅವು ತಮ್ಮ ತಮ್ಮೊಳಗೆ ಜಗಳವಾಡುತ್ತಿದ್ದವು. ಆ ರಾಜ್ಯಗಳ ಮಧ್ಯೆ ಸ್ನೇಹ ಬಾಂಧವ್ಯಗಳನ್ನು ಬೆಳೆಸಲು ಒಲಿಂಪಿಕ್ ಕ್ರೀಡೋತ್ಸವ ಹುಟ್ಟಿಕೊಂಡಿತು. ಈ ಕ್ರೀಡೋತ್ಸವವು ಹದಿನಾಲ್ಕು ದಿನಗಳ ಕಾಲ ನಡೆಯುತ್ತಿತ್ತು.

ಓಟ, ನೆಗೆತ, ಈಟಿ ಎಸೆತ, ಮಲ್ಲಯುದ್ಧ, ರಥ ಓಡಿಸುವುದು ಹೀಗೆ ಬಗೆ ಬಗೆಯ ಸ್ಪರ್ಧೆಗಳು ನಡೆಯುತ್ತಿದ್ದವು. ಸ್ಪರ್ಧೆಯಲ್ಲಿ ಗೆದ್ದು ಮೊದಲಿಗನಾದವನಿಗೆ "ಆಲಿವ್' ಮರದ ಎಲೆಗಳಿಂದ ತಯಾರಿಸಿದ ಕಿರೀಟ ತಲೆಗೆ ತೊಡಿಸಿ ಗೌರವಿಸುತ್ತಿದ್ದರು. ಶಿಲ್ಪಿಗಳು ಜಯಗಳಿಸಿದವರ ಮೂರ್ತಿಗಳನ್ನು ಕೆತ್ತುತ್ತಿದ್ದರು. ಭೂತಕನ್ನಡಿಯನ್ನುಪಯೋಗಿಸಿ ಸೂರ್ಯನ ಕಿರಣಗಳಿಂದ ಒಲಿಂಪಿಕ್ಸ್ ಪಂಜನ್ನು ಹೊತ್ತಿಸಿ ಹದಿನಾಲ್ಕು ದಿನಗಳ ಕಾಲ ಎಡೆಬಿಡದೆ ಉರಿಸುತ್ತಿದ್ದರು.

1896ರಲ್ಲಿ ಹೊಸಯುಗದ ಮೊದಲನೇ ಕ್ರೀಡೋತ್ಸವವು ಗ್ರೀಸ್ ದೇಶದ ಅಥೇನ್ಸ್ ನಲ್ಲಿ ನಡೆಯಿತು. ಅದರಲ್ಲಿ ಎಂಟು ರಾಷ್ಟ್ರಗಳು ಭಾಗವಹಿಸಿದುವು. ಈಗಲೂ ಒಲಿಂಪಿಕ್ ಪಂಜನ್ನು ಭೂತಕನ್ನಡಿಯ ಮೂಲಕ ಒಬ್ಬ ಹೆಣ್ಣು ಮಗಳು ಉರಿಸಿ ಒಬ್ಬರಾದ ನಂತರ ಇನ್ನೊಬ್ಬರಂತೆ ಹಿಡಿದು ಅಥೆನ್ಸಿಗೆ ಒಯ್ಯುವರು. ಈ ಪಂಜಿನ ಸಹಾಯದಿಂದ ಒಲಿಂಪಿಕ್ ಸ್ಪರ್ಧೆ ನಡೆಯುವ ಸ್ಥಳದಲ್ಲಿ ಇರಿಸಿದ ದೀಪವನ್ನು ಉರಿಸುವರು.

ಈ ದೀಪವನ್ನು ಉರಿಸಿದ ನಂತರ ಕ್ರೀಡಾಪಟುಗಳು ತಮ್ಮ ತಮ್ಮ ರಾಷ್ಟ್ರಧ್ವಜ ಹಿಡಿದು ಸಾಲಾಗಿ ಕ್ರೀಡಾಂಗಣಕ್ಕೆ ಬರುತ್ತಾರೆ. ಎಲ್ಲರಿಗಿಂತಲೂ ಮುಂದೆ ನೀಲಿ ಮತ್ತು ಬಿಳಿ ಬಣ್ಣದ ಪತಾಕೆಗಳನ್ನು ಹಿಡಿದ ಗ್ರೀಕ್ ಕ್ರೀಡಾಳುಗಳಿರುತ್ತಾರೆ. ಎಲ್ಲರಿಗಿಂತ ಹಿಂದೆ ಆ ವರ್ಷ ಕ್ರೀಡೆಗಳನ್ನು ನಡೆಸುವ ರಾಷ್ಟ್ರದ ಕ್ರೀಡಾಳುಗಳಿರುತ್ತಾರೆ. ಒಲಿಂಪಿಕ್ ಧ್ವಜವು 1920ರಲ್ಲಿ ಬಳಕೆಗೆ ಬಂದಿತು. ಇದರಲ್ಲಿ ಬಿಳಿಯ ಹಿನ್ನೆಲೆಯಲ್ಲಿ ಐದು ಬಣ್ಣದ ಬಳೆಗಳು ಒಂದರೊಳಗೊಂದು ಸೇರಿರುವ ಚಿಹ್ನೆ ಇದೆ. ಐದು ಬಳೆಗಳು ವಿಶ್ವದಲ್ಲಿ ಆಗ ಅಸ್ತಿತ್ವದಲ್ಲಿದ್ದ ಐದು ಖಂಡಗಳ ಸಂಕೇತವಾಗಿದೆ.

2024ನೇ ವರ್ಷದ ಒಲಿಂಪಿಕ್ ಕ್ರೀಡಾಕೂಟವು ಫ್ರಾನ್ಸಿನ ರಾಜಧಾನಿ ಪ್ಯಾರಿಸ್ ನಲ್ಲಿ ಜುಲೈ 26 ರಿಂದ ಆಗಸ್ಟ್ 11 ರ ವರೆಗೆ ಒಟ್ಟು ಹದಿನೇಳು ದಿನಗಳ ಕಾಲ ನಡೆಯಿತು. ಕ್ರೀಡಾಕೂಟದಲ್ಲಿ ಭಾರತೀಯ ಕ್ರೀಡಾಪಟುಗಳೂ ಭಾಗವಹಿಸಿದ್ದು ಅನೇಕ ಪದಕಗಳನ್ನು ತಮ್ಮದಾಗಿಸಿದ್ದಾರೆ.

## ಚಟುವಟಿಕೆಗಳು

### ಉತ್ತರ ಬರೆಯುವ

1. ಒಲಿಂಪಿಕ್ ಕ್ರೀಡೆಗಳು ಮೊತ್ತಮೊದಲು ಆರಂಭವಾದುದು ಎಲ್ಲಿ?
2. ಆರಂಭ ಕಾಲದಲ್ಲಿ ಸ್ಪರ್ಧೆಯಲ್ಲಿ ಗೆದ್ದವರನ್ನು ಹೇಗೆ ಗೌರವಿಸುತ್ತಿದ್ದರು?
3. ಒಲಿಂಪಿಕ್ ಪಂಜನ್ನು ಹೇಗೆ ಉರಿಸುತ್ತಾರೆ?
4. ಒಲಿಂಪಿಕ್ ಧ್ವಜವು ಯಾವ ವರ್ಷದಿಂದ ಬಳಕೆಗೆ ಬಂದಿತು?
5. 2024 ರ ಒಲಿಂಪಿಕ್ ಕ್ರೀಡೋತ್ಸವವು ಎಲ್ಲಿ ನಡೆಯಿತು?

### ಕ್ರಮೀಕರಿಸಿ ಬರೆಯುವ

ಕೆಳಗಿನ ವಾಕ್ಯಗಳನ್ನು ಪಾಠದಲ್ಲಿ ಬಂದಂತೆ ಕ್ರಮೀಕರಿಸಿ ಬರೆಯಿರಿ.

- ಭೂತಕನ್ನಡಿಯನ್ನುಪಯೋಗಿಸಿ ಸೂರ್ಯನ ಕಿರಣಗಳಿಂದ ಪಂಜನ್ನು ಹೊತ್ತಿಸಿ ಹದಿನಾಲ್ಕು ದಿನಗಳ ತನಕ ಎಡೆಬಿಡದೆ ಉರಿಸುತ್ತಿದ್ದರು.
- 1896ರಲ್ಲಿ ಹೊಸ ಯುಗದ ಮೊದಲನೇ ಕ್ರೀಡೋತ್ಸವ ಗ್ರೀಸ್ ದೇಶದ ಅಥೇನ್ಸ್‌ನಲ್ಲಿ ನಡೆದಿತ್ತು.
- ಒಲಿಂಪಿಕ್ ಕ್ರೀಡೆಗಳು ಗ್ರೀಸ್ ದೇಶದ ಎಲ್ಲೀಸ ಕಣಿವೆಯಲ್ಲಿರುವ ಒಲಿಂಪಿಯಾ ಎಂಬ ಬಯಲಿನಲ್ಲಿ ನಡೆದುದರಿಂದ ಇವುಗಳಿಗೆ ಒಲಿಂಪಿಕ್ ಕ್ರೀಡೆಗಳೆಂದು ಹೆಸರು ಬಂತು.
- ಓಟ, ನೆಗೆತ, ಈಟಿ ಎಸೆತ, ಮಲ್ಲಯುದ್ಧ, ರಥ ಓಡಿಸುವುದು ಹೀಗೆ ಬಗೆ ಬಗೆಯ ಸ್ಪರ್ಧೆಗಳು ನಡೆಯುತ್ತಿದ್ದವು.

### ಕರಪತ್ರ ತಯಾರಿಸುವ

ನಿಮ್ಮ ಶಾಲೆಯಲ್ಲಿ ನಡೆಯುವ ಆಟೋಟ ಸ್ಪರ್ಧೆಯ ಬಗ್ಗೆ ಚರ್ಚಿಸಲು ಪೂರ್ವಭಾವಿ ಸಭೆಯನ್ನು ಕರೆಯಲು ತೀರ್ಮಾನಿಸಲಾಗಿದೆ. ಅದಕ್ಕಾಗಿ ಒಂದು ಕರಪತ್ರ ತಯಾರಿಸಿರಿ.

**ಸಮಾನಾರ್ಥ ಪದ ಬರೆಯುವ**

ಕೆಳಗೆ ನೀಡಿರುವ ಪದಗಳ ಸಮಾನಾರ್ಥ ಪದಗಳನ್ನು ಪಾಠಭಾಗದಿಂದ ಆಯ್ದು ಬರೆಯಿರಿ.

- ದಿನಕರ -
- ಬೆಳಗಿಸುತ್ತಿದ್ದರು -
- ಆಟಗಳು -
- ಬಾವುಟ -

## ಪಾರಾ ಒಲಿಂಪಿಯನ್ - ದೇವೇಂದ್ರ ಜಝುರಿಯಾ




ಬಾಲ್ಯದಲ್ಲಿ ಸಾಧಾರಣ ವ್ಯಕ್ತಿಯಂತೆ ಇದ್ದು ಅನಂತರ ಎಂಟನೇ ವಯಸ್ಸಿನಲ್ಲಿ ಮರ ಹತ್ತುವ ಸಂದರ್ಭದಲ್ಲಿ ವಿದ್ಯುತ್ ಸ್ಪರ್ಶದಿಂದ ತನ್ನ ಕೈಯನ್ನು ಕಳೆದುಕೊಂಡ ಉತ್ಸಾಹಿ ಬಾಲಕ ದೇವೇಂದ್ರ ಜಝುರಿಯಾ. ಅಪಘಾತಕ್ಕಿಂತ ಮೊದಲು ಗೆಳೆಯರೊಂದಿಗೆ ಉತ್ಸಾಹದಿಂದ ಆಟೋಟ ಸ್ಪರ್ಧೆಯಲ್ಲಿ ಭಾಗವಹಿಸುತ್ತಿದ್ದ ಈ ತುಂಟ ಪೋರನನ್ನು ಗೆಳೆಯರು ಕ್ರಮೇಣ ದೂರವಿರಿಸಲು ಆರಂಭಿಸಿದರು. ಈ ಹುಡುಗ ತಮಗೊಂದು ಹೊರೆ ಎಂಬ ಕಾರಣದಿಂದ ಗೆಳೆಯರು ಇವನಿಂದ ದೂರವಾದರು. ಈ ದೂರವಿರಿಸುವಿಕೆ ದೇವೇಂದ್ರನನ್ನು ಜಾವೆಲಿನ್ ಎಸೆತದಲ್ಲಿ ಲೋಕದಲ್ಲಿ ಎಲ್ಲರೂ ಗುರುತಿಸುವಂತೆ ಮಾಡಿತು.

ಪಾರಾಅಥ್ಲೆಟ್ಸ್ ಸ್ಪರ್ಧೆಯಲ್ಲಿ ಬಾಲಕನ ಸಾಧನೆಯನ್ನು ಕಂಡು ತರಬೇತುದಾರರಾದ ರಿಪುದಮನ್ ಸಿಂಗ್ ಬಾಲಕನನ್ನು ಕ್ರೀಡೆಯಲ್ಲಿ ಜವಾಬ್ದಾರಿಯಿಂದ ಆಡಲು ಪ್ರೇರೇಪಿಸಿದರು. ದೇವೇಂದ್ರ ಜಝುರಿಯಾ 20 ನೇ ಶತಮಾನದ ಆರಂಭದಲ್ಲಿ ಅಂತಾರಾಷ್ಟ್ರೀಯ ಸ್ಪರ್ಧೆಯಲ್ಲಿ ಉತ್ತಮ ಸಾಧನೆ ಮಾಡಿ 2004 ರ ಪಾರಾ ಒಲಿಂಪಿಕ್ ಸ್ಪರ್ಧೆಗೆ ಅರ್ಹತೆ ಪಡೆದನು ಮತ್ತು ದಾಖಲೆ ಎಸೆತದೊಂದಿಗೆ ಚಿನ್ನದ ಪದಕ ಗಳಿಸಿದನು. ದೀರ್ಘಕಾಲದ ಬಿಡುವಿನ ಅನಂತರ 2016 ರಲ್ಲಿ ಮತ್ತೊಂದು ದಾಖಲೆ ಎಸೆತದೊಂದಿಗೆ ಚಿನ್ನ ಪಡೆದು ಪಾರಾ ಒಲಿಂಪಿಕ್‌ನಲ್ಲಿ ಎರಡು ಚಿನ್ನದ ಪದಕ ಪಡೆದ ಮೊದಲ ಭಾರತೀಯ ಎಂಬ ಖ್ಯಾತಿಗೆ ಪಾತ್ರನಾದನು.

## ಆಲ್ಬಂ ತಯಾರಿ

ವಿವಿಧ ಆಟೋಟ ಸ್ಪರ್ಧೆಯಲ್ಲಿ ಭಾಗವಹಿಸಿದ ಭಾರತೀಯ ಕ್ರೀಡಾಳುಗಳ ಚಿತ್ರ ಸಂಗ್ರಹಿಸಿ ಆಲ್ಬಂ ತಯಾರಿಸಿರಿ.

## ಹಾಡಿರಿ ಆಸ್ವಾದಿಸಿರಿ

### ಬಗೆಬಗೆ ಆಟವ ಆಡೋಣ

ಪ್ರೀತಿಯ ಗೆಳೆಯರೆ ಬನ್ನಿರಿ ಎಲ್ಲರು
ಬಯಲೊಳು ಆಟವ ಆಡೋಣ
ಕುಳಿತು ಕುಳಿತು ಕಲಿತ ದಣಿವನು
ಆಡುತ ಆಡುತ ನೀಗೋಣ

ಪಾಠವ ಕಲಿಯಲು ಆಟವೆ ಮೂಲ
ಹಿರಿಯರು ಹೇಳುವರು
ದೇಹದ ಜಾಡ್ಯವ ಮನದುಮ್ಮಳವನು
ಆಟವು ಕಳೆಯುವುದು

ಬಯಲಲಿ ಆಡುವ ಮಜವೇ ಬೇರೆ
ಬಣ್ಣಿಸಲಸದಳವು
ತಣ್ಣನೆ ಗಾಳಿಯ ಪ್ರಕೃತಿಯ ಚೆಲುವು
ಮುದವನು ನೀಡುವುದು

ನರನಾಡಿಗಳು ಬಲಯುತವಾಗಿ
ಶಕ್ತಿಯು ತುಂಬುವುದು
ರೋಚಕ ಆಟವು ಮನವನು ಅರಳಿಸಿ
ಕಲಿಕೆಯು ಹೆಚ್ಚುವುದು

ತುಮುಲದ ಬಾಳಲಿ ಸಂಕಟ ಕಳೆಯಲು
ಬಗೆ ಬಗೆ ಆಟವ ಆಡೋಣ
ನೆಮ್ಮದಿ ಶಾಂತಿಯ ಆರೋಗ್ಯ ಭಾಗ್ಯವ
ಅನುದಿನ ನಾವು ಪಡೆಯೋಣ

- ಎಸ್.ವಿ. ಭಟ್

# ಸೋಮಾರಿ ಗುಂಡ

**ದೃಶ್ಯ – 1 (ಗುಂಡನ ಮನೆ)**

(ಗುಂಡ ತುಂಬಾ ಸೋಮಾರಿ. ಯಾವುದೇ ಕೆಲಸವನ್ನು ಮಾಡುತ್ತಿರಲಿಲ್ಲ. ಪ್ರತಿದಿನ ಚೆನ್ನಾಗಿ ತಿಂದು ನಿದ್ದೆ ಮಾಡುತ್ತಾನೆ. ಶಾಲೆಗೆ ಸರಿಯಾಗಿ ಹೋಗುವುದಿಲ್ಲ. ತುಂಬಾ ದಪ್ಪವಾಗಿದ್ದ ಆತನನ್ನು ಗೆಳೆಯರು ಉಂಡಾಡಿ ಗುಂಡ ಎಂದು ಕರೆಯುತ್ತಿದ್ದರು. ಒಂದು ದಿನ ಬೆಳಗಿನ ಸಮಯ. ಗುಂಡ ಮಲಗಿದ್ದಾನೆ. ಅಮ್ಮ ಎಬ್ಬಿಸಲು ಬರುತ್ತಾರೆ.)



ಅಮ್ಮ : ಲೋ ಗುಂಡಾ... ಆಗಲೇ ಗಂಟೆ ಎಂಟು ಆಯ್ತು. ಏಳೋ...

ಗುಂಡ : (ಮುಸುಕೆಳೆಯುತ್ತಾ) ಏನಮ್ಮ ಸ್ವಲ್ಪ ಮಲಗ್ತೇನಮ್ಮ.

ಅಮ್ಮ : ಏಯ್... ಮರೀ... ಇವತ್ತು ಶಾಲೆ ಇದೆ. ಬೇಗ ಹಲ್ಲುಜ್ಜಿ ಸ್ನಾನ ಮಾಡಿ, ತಿಂಡಿ ತಿಂದು ಶಾಲೆಗೆ ಹೊರಡು.

ಗುಂಡ : (ಮಲಗಿದಲ್ಲಿಂದಲೇ) ಈ ಚಳಿಗೆ ಸ್ನಾನಾನಾ? ಅಯ್ಯೋ ಬೇಡಮ್ಮ...

ಅಮ್ಮ : ಈಗ ನೀನು ಏಳ್ತಿಯೋ, ಇಲ್ವೋ? ನಿನ್ನ ಶಾಲೆಯ ಬಸ್ಸು ಈಗ ಬರ್ತದೆ... ಏಳೋ... (ಜೋರು ಮಾಡುತ್ತಾಳೆ.)

ಗುಂಡ : ಆಯ್ತು. (ಉದಾಸೀನದಿಂದ ಏಳುತ್ತಾನೆ) ಎಲ್ಲಿ ನನ್ನ ಬ್ರಷ್ ಕೊಡಮ್ಮ... (ಗುಂಡ ಸ್ನಾನಕ್ಕೆ ಹೋಗಿ ಐದು ನಿಮಿಷದಲ್ಲಿ ಬರುತ್ತಾನೆ.) ಅಮ್ಮಾ... ಚಾ ಕೊಡು.

ಅಮ್ಮ : ಇಷ್ಟು ಬೇಗ ನಿನ್ನ ಕೆಲಸ ಆಯ್ತಾ? ಸರಿಯಾಗಿ ಹಲ್ಲುಜ್ಜಿದ್ದೀಯಾ? ಅಯ್ಯೋ... ನೀನೇ.. ಸರಿಯಾಗಿ ಸ್ನಾನಾನೂ ಮಾಡಲ್ಲ.

ಗುಂಡ : ಸಾಕಮ್ಮ... ತುಂಬಾ ಹೊತ್ತು ಸ್ನಾನ ಮಾಡಿದ್ರೆ ಜ್ವರ ಬರುತ್ತದೆ. ಹಲ್ಲು ತುಂಬಾ ತಿಕ್ಕಿದರೆ ಸವೆದೀತು.

(ಅಮ್ಮ ತಿಂಡಿ, ಚಾ ತಂದಿರಿಸುತ್ತಾಳೆ. ಅಷ್ಟರಲ್ಲಿ ಗುಂಡ ಶಾಲೆಯ ಸಮವಸ್ತ್ರ ಧರಿಸಿ ಬರುತ್ತಾನೆ.)

ಅಮ್ಮ : ಹುಂ... ಬೇಗ ತಿನ್ನು... ಬಸ್ಸು ಬರುವ ಸಮಯ ಆಯ್ತು.

ಗುಂಡ : (ಗುಂಡ ಗಬಗಬನೆ ತಿಂದು) ಅಮ್ಮಾ... ಇನ್ನೂ ಒಂದು ದೋಸೆ ಹಾಕು... ಹಸಿವೆ ಆಗ್ತದೆ.

ಅಮ್ಮ : ಸಾಕು ಮರೀ... ಆಗ್ಲೆ ದೋಸೆ ಐದಾಯ್ತು... 'ಅತಿಯಾದರೆ ಅಮೃತವೂ ವಿಷ'. ಇನ್ನು ಹೊರಡು.

(ಅಷ್ಟರಲ್ಲಿ ಬಸ್ಸಿನ ಹಾರ್ನ್ ಕೇಳುವುದು. ಗುಂಡ ಕೈ ತೊಳೆದು ಬ್ಯಾಗ್ ಹೆಗಲಿಗೆ ಹಾಕಿ ಹೊರಡುವನು)

ಗುಂಡ : ಅಮ್ಮ ಟಾಟಾ. ಸಂಜೆ ದೋಸೆ ಬೇಡಮ್ಮ. ನೂಡಲ್ಸ್ ಅಥವಾ ಬೇಕರಿ ತಿಂಡಿ ಆದೀತಮ್ಮ.

ಅಮ್ಮ : ಟಾ ಟಾ ಮರಿ. (ಅಮ್ಮ ಒಳಗೆ ಹೋಗುತ್ತಾರೆ)

## ದೃಶ್ಯ - 2 (ತರಗತಿ ಕೋಣೆ)

(ತರಗತಿಯಲ್ಲಿ ಅಧ್ಯಾಪಕರು ಮಕ್ಕಳಲ್ಲಿ ಮಾತನಾಡುತ್ತಾರೆ. ಅಷ್ಟರಲ್ಲಿ ಗುಂಡ ಬರುತ್ತಾನೆ

ಅಧ್ಯಾಪಕರು : ನೋಡಿ ಮಕ್ಕಳೇ... ನಾಳೆ... ನಮ್ಮ...

(ಅಷ್ಟರಲ್ಲಿ)

ಗುಂಡ : ಸಾರ್... (ಹೊರಗೆ ನಿಂತು ಕರೆಯುತ್ತಾನೆ.)

ಅಧ್ಯಾಪಕರು : ಬಾರೋ ಗುಂಡ... ದಿನಾ ತಡವಾಗಿಯೇ ಶಾಲೆಗೆ ಬರುತ್ತೀಯಲ್ಲ..

ಗುಂಡ : ಏಳುವಾಗ ತಡ ಆಯ್ತು ಸರ್. (ಹಲ್ಲು ಕಿಸಿಯುತ್ತಾನೆ)

ಅಧ್ಯಾಪಕರು : ಆಯ್ತಪ್ಪಾ... ತಡ ಆದ್ರೂ ಬಂದೆಯಲ್ಲ. ಕುಳಿತುಕೋ. ಮಕ್ಕಳೇ, ನಾಳೆ ನಮ್ಮ ಶಾಲೆಯಲ್ಲಿ ಉಪಜಿಲ್ಲಾ ಮಟ್ಟದ ಆಟೋಟ ಸ್ಪರ್ಧೆಗೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುವುದು. ಭಾಗವಹಿಸುವವರು ಹೆಸರು ನೀಡಿ.

ಜೂಹಿ : ನಾನಿದ್ದೇನೆ ಸರ್.

ಜೋಸೆಫ್ : ನಾನಿದ್ದೇನೆ ಸರ್.

ಅನಿಲ : ನಾನೂ ಇದ್ದೇನೆ ಸರ್.

ಗೋಕುಲ : ನನ್ನ ಹೆಸರು ಹಾಕಿ ಸರ್.

(ಎಲ್ಲಾ ಮಕ್ಕಳು 'ನಾನಿದ್ದೇನೆ' ಎಂದು ಬೊಬ್ಬೆ ಹಾಕುವರು. ಗುಂಡ ಮಾತ್ರ ಸುಮ್ಮನಿದ್ದನು.)

ಅಧ್ಯಾಪಕರು : ಏನೋ ಗುಂಡ? ನೀನು ಯಾವುದಕ್ಕೆ ಸೇರುತ್ತಿಯಾ?

ಗುಂಡ : ಅಯ್ಯೋ... ನಾನಿಲ್ಲ ಸರ್...

ರಮೇಶ : ಅವನು ಓಡಿದ್ರೆ ಬಿದ್ದಾನು ಸರ್... ಅವನನ್ನು ಎತ್ತಲು ನಾಲ್ಕು ಜನ ಬೇಕು.

(ಎಲ್ಲರೂ ನಗುವರು. ಗುಂಡ ತಲೆ ತಗ್ಗಿಸಿ ಕುಳಿತುಕೊಳ್ಳುವನು)

ಅಧ್ಯಾಪಕರು : ಸೈಲೆಂಟ್... ರಮೇಶಾ... ಹಾಗೆಲ್ಲ ಹೇಳಬಾರದು. ಎಲ್ಲರಿಗೂ ಒಂದೇ ರೀತಿಯ ಸಾಮರ್ಥ್ಯ ಇರುವುದಿಲ್ಲ. ಗುಂಡಾ... ನೀನು ಪ್ರಯತ್ನಿಸಿದರೆ ನಿನಗೆ ಭಾಗವಹಿಸಬಹುದು. ಮನೆಯಲ್ಲಿ ಅಭ್ಯಾಸ ಮಾಡು. 'ಸಾಧಿಸಿದರೆ ಸಬಳ ನುಂಗಬಹುದು' ಅಂತ ಕೇಳಲಿಲ್ಲವೇ.... ಪ್ರಯತ್ನಿಸು.

ಗುಂಡ : ಆಯ್ತು ಸರ್. ಇವತ್ತೇ ಪ್ರಯತ್ನಿಸುತ್ತೇನೆ.

(ಅಷ್ಟರಲ್ಲಿ ಗಂಟೆಯ ಸದ್ದು ಕೇಳಿಸುವುದು. ಎಲ್ಲರೂ ಹೊರಗೆ ಓಡುವರು. ಗುಂಡನೂ ಮೆಲ್ಲಗೆ ಹೊರಗೆ ಹೋಗುವನು.)

## ದೃಶ್ಯ - 3 (ಆಸ್ಪತ್ರೆ)

(ಗುಂಡನು ಹಾಸಿಗೆಯಲ್ಲಿ ಮಲಗಿದ್ದಾನೆ. ಡಾಕ್ಟರ್ ಅವನನ್ನು ಪರೀಕ್ಷಿಸುತ್ತಿದ್ದಾರೆ. ಗುಂಡನ ಅಮ್ಮ ಬಳಿಯಲ್ಲಿ ನಿಂತಿದ್ದಾರೆ.)

ಡಾಕ್ಟರ್ : ಏನು? ಏನಾಯ್ತು?

ಅಮ್ಮ : ಏನು ಹೇಳಲಿ ಡಾಕ್ಟ್ರೇ. ಶಾಲೆಯಿಂದ ಬಂದು ಓಡಲು ಅಭ್ಯಾಸ ಮಾಡಿದ. ಬಿದ್ದು ಹೀಗಾಯ್ತು.

ಡಾಕ್ಟರ್ : ನಿನ್ನ ಹೆಸರು ಏನು ಪುಟ್ಟಾ?

ಗುಂಡ : ಗುಂಡ

ಡಾಕ್ಟರ್ : ಯಾವ ತರಗತಿಯಲ್ಲಿ ಓದುತ್ತಿರುವೆ?

ಗುಂಡ : ನಾಲ್ಕನೇ ಕ್ಲಾಸ್




ಡಾಕ್ಟರ್ : ಸಿಹಿ ತಿಂಡಿ ಇಷ್ಟಾನಾ?

ಗುಂಡ : ಹಾಂ...

ಡಾಕ್ಟರ್ : ಚೆನ್ನಾಗಿ ಓದುತ್ತೀಯಾ? ದಿನಾ ಆಟ ಆಡ್ತೀಯಾ?

ಅಮ್ಮ : ಎಲ್ಲಿ ಡಾಕ್ಟ್ರೇ... ಪ್ರತಿದಿನ ತಿನ್ನೋದೇ ಆಯ್ತು. ಬೆಳಗ್ಗೆ ಎಂಟು ಗಂಟೆ ಆದ್ರೂ ಏಳಲ್ಲ. ಒಂದು ಕೆಲಸಾನು ಮಾಡಲ್ಲ. ನಿದ್ದೆಯೇ ಆಯ್ತು. ದಿನಾ ಮಂಕಾಗಿ ಇರುತ್ತಾನೆ. ಯಾವುದೇ ಲವಲವಿಕೆ ಇಲ್ಲ.

ಡಾಕ್ಟರ್ : ನೋಡಿ ಅಮ್ಮ... ನಿಮ್ಮ ಮಗ ಆರೋಗ್ಯವಾಗಿಯೇ ಇದ್ದಾನೆ. ಆದರೆ ಸ್ವಲ್ಪ ವ್ಯಾಯಾಮ ಬೇಕು ಅಷ್ಟೆ. ಯಾವುದೇ ವ್ಯಾಯಾಮ ಮಾಡದ ಕಾರಣ ಹೀಗೆ ದಪ್ಪವಾಗಿದ್ದಾನೆ.

ಅಮ್ಮ : ಈಗ ನಾನೇನು ಮಾಡಲಿ ಸರ್?

ಡಾಕ್ಟರ್ : ಬಿದ್ದು ಸಣ್ಣ ಗಾಯ ಆಗಿದೆ. ಮದ್ದು ಕೊಡೋಣ. ಇವನಿಗೆ ಹೆಚ್ಚು ಕರಿದ ತಿಂಡಿ ನೀಡಬೇಡಿ. ಅತಿಯಾಗಿ ತಿನ್ನಲು ಕೊಡಬೇಡಿ. ಪ್ರತಿದಿನ ಆಟವಾಡಲು ಹೇಳಿ. ಸಮತೂಕದ ಪೋಷಕಾಹಾರ ಮತ್ತು ವ್ಯಾಯಾಮ ಮಾಡಿದರೆ ಹೆಚ್ಚು ಆರೋಗ್ಯದಿಂದಿರಲು ಸಾಧ್ಯ. (ಗುಂಡನನ್ನು ನೋಡಿ) ಲೋ ಪುಟ್ಟಾ... ಇಂದಿನಿಂದ ಪ್ರತಿದಿನ ಬೆಳಗ್ಗೆ ಬೇಗನೆ ಏಳಬೇಕು. ಸರಳ ವ್ಯಾಯಾಮ ಮಾಡಬೇಕು. ನಡೆದುಕೊಂಡೇ ಶಾಲೆಗೆ ಹೋಗು. ಆಸಕ್ತಿಯಿಂದ ಎಲ್ಲದರಲ್ಲೂ ಭಾಗವಹಿಸು. ಉದಾಸೀನ ಮಾಡಬೇಡ.

ಗುಂಡ : ಆಯ್ತು ಸರ್.

ಅಮ್ಮ : ತುಂಬಾ ಉಪಕಾರ ಆಯ್ತು ಡಾಕ್ಟ್ರೇ.... ನಮಸ್ಕಾರ. ಬರುತ್ತೇನೆ.

- ತೆರೆ -

## ಚಟುವಟಿಕೆಗಳು

### ಉತ್ತರ ಬರೆಯಿರಿ

1. ಗುಂಡನು ದಿನಾಲೂ ಶಾಲೆಗೆ ತಡವಾಗಲು ಕಾರಣವೇನು?
2. ಅಧ್ಯಾಪಕರು ಗುಂಡನನ್ನು ಹೇಗೆ ಸಮಾಧಾನಪಡಿಸಿದರು?
3. ಡಾಕ್ಟರ್ ಗುಂಡನಿಗೆ ಯಾವ ಸೂಚನೆಗಳನ್ನು ನೀಡಿದರು?
4. ಗುಂಡ ದಪ್ಪಗೆ ಆಗಲು ಡಾಕ್ಟರ್ ಹೇಳಿದ ಕಾರಣ ಏನು?

**ಈ ನಾಟಕದಲ್ಲಿ ನಿಮಗೆ ಮೆಚ್ಚುಗೆಯಾದ ಕಥಾಪಾತ್ರ ಯಾವುದು? ಯಾಕೆ ? ಬರೆಯಿರಿ.**

### ಕಥೆ ಬರೆಯುವ

ನಾಟಕದ ಕಥೆಯನ್ನು ಸಂಕ್ಷಿಪ್ತವಾಗಿ ಬರೆಯಿರಿ.

### ಅಭಿನಯಿಸುವ

ನಾಟಕವನ್ನು ಓದಿದಿರಲ್ಲವೇ? ಇದರಲ್ಲಿರುವ ಕಥಾಪಾತ್ರವನ್ನು ಹಂಚಿಕೊಂಡು ಅಭಿನಯಿಸಿರಿ.

**ಆವರಣದಲ್ಲಿ ಕೊಟ್ಟಿರುವ ಪದಗಳ ಸರಿಯಾದ ರೂಪವನ್ನು ಖಾಲಿಬಿಟ್ಟ ಸ್ಥಳದಲ್ಲಿ ಬರೆಯಿರಿ.**

ಸಾಯಂಕಾಲ ಶಾಲೆ ________(ಬಿಡು). ಮಕ್ಕಳು ಹೋ... ಎಂದು ಜೋರಾಗಿ ಬೊಬ್ಬಿಡುತ್ತಾ ತರಗತಿಯಿಂದ ಹೊರಗೆ ________ (ಓಡು). ನಿಧಾನವಾಗಿ ಹೊರಗೆ ಹೋಗಿ ಎಂದು ಅಧ್ಯಾಪಕರು ________ (ಹೇಳು). ಕನಕ ಮಾತ್ರ ನಿಧಾನವಾಗಿ ಅಂಗಳಕ್ಕೆ ________ (ಇಳಿ). ನನ್ನ ತಮ್ಮ ಎಲ್ಲಿ ಎಂದು ಸುತ್ತಲೂ ________ (ನೋಡು). ಅವಳ ತಮ್ಮ ಶಾಲೆಯ ಅಂಗಳದ ಬದಿಯಲ್ಲಿ ಅಳುತ್ತಾ ________ (ನಿಲ್ಲು). ಕನಕ ತಮ್ಮನ ಬಳಿಗೆ ________ (ಓಡು). ಅಷ್ಟರಲ್ಲಿ ಶಾಲಾ ವಾಹನ ಬಂದು ________ (ನಿಲ್ಲು).

### ಭಿತ್ತಿಪತ್ರ ತಯಾರಿಸುವ

ಉತ್ತಮ ಆರೋಗ್ಯಾಭ್ಯಾಸಗಳ ಕುರಿತು ಅರಿವು ಮೂಡಿಸಲು ಒಂದು ಭಿತ್ತಿಪತ್ರ ತಯಾರಿಸಿರಿ.

ಓದಿರಿ

## ಯೋಗ ಮತ್ತು ಆರೋಗ್ಯ

ಯೋಗ ಶಿಕ್ಷಣವು ಇಡೀ ವಿಶ್ವದ ಮಾನವ ಕೋಟಿಗೆ ನಮ್ಮ ದೇಶವು ನೀಡಿದ ಕೊಡುಗೆಯಾಗಿದೆ. ಯೋಗವು ಆರೋಗ್ಯಕರ ಜೀವನ ಶೈಲಿಯ ಕಲೆ ಮತ್ತು ವಿಜ್ಞಾನವಾಗಿದೆ. ಮನಸ್ಸು ಮತ್ತು ದೇಹದ ನಡುವೆ ಸಾಮರಸ್ಯವನ್ನು ತರುವಲ್ಲಿ ಯೋಗ ಪ್ರಧಾನ ಪಾತ್ರವಹಿಸುತ್ತದೆ. ಮಕ್ಕಳ ದೈಹಿಕ, ಮಾನಸಿಕ ಮತ್ತು ಭಾವನಾತ್ಮಕ ಆರೋಗ್ಯಕ್ಕೆ ಇದು ಬಹಳ ಪ್ರಯೋಜನಕಾರಿಯಾಗಿದೆ.

ಯೋಗದಿಂದ ರೋಗ ತಡೆಗಟ್ಟಲು, ಆರೋಗ್ಯದ ಸಂರಕ್ಷಣೆ ಮತ್ತು ಜೀವನ ಸಂಬಂಧೀ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದು. ಇದು ಮನಸ್ಸು ಮತ್ತು ದೇಹಗಳ ಬೆಳವಣಿಗೆಯನ್ನು ಸಮನ್ವಯಗೊಳಿಸುವ ಕಲೆಯೂ ಹೌದು. ದೈಹಿಕವಾಗಿ ಶಕ್ತಿ ಸಾಮರ್ಥ್ಯವನ್ನು ಹೆಚ್ಚಿಸಿ ಸಹಿಷ್ಣುತೆಯನ್ನು ಅಭಿವೃದ್ಧಿಗೊಳಿಸಲು ಯೋಗ ಸಹಕಾರಿಯಾಗಿದೆ. ಏಕಾಗ್ರತೆಯನ್ನು ಹೆಚ್ಚಿಸಿ ಮಾನಸಿಕ ನೆಮ್ಮದಿಯನ್ನು ನೀಡುವುದರೊಂದಿಗೆ ದೈನಂದಿನ ಒತ್ತಡ ಮತ್ತು ಬಿಗುವನ್ನು ಕಡಿಮೆ ಮಾಡುತ್ತದೆ.

ಯೋಗದಲ್ಲಿ ವಿವಿಧ ರೀತಿಯ ಆಸನಗಳಿವೆ. ಉಸಿರಾಟದ ವ್ಯಾಯಾಮಗಳ (ಪ್ರಾಣಾಯಾಮ) ಮೂಲಕ ಶರೀರದ ಎಲ್ಲಾ ರೀತಿಯ ಒತ್ತಡಗಳಿಗೂ ಪರಿಹಾರ ಕಂಡುಕೊಳ್ಳಬಹುದು. ಇದರಿಂದಾಗಿ ಸ್ನಾಯುಗಳ ಬಲ ವೃದ್ಧಿಸುವುದರೊಂದಿಗೆ ರಕ್ತದೊತ್ತಡವನ್ನು ನಿಯಂತ್ರಿಸಲೂ ಸಾಧ್ಯವಿದೆ ಎಂದು ಸಾಬೀತುಪಡಿಸಲಾಗಿದೆ.

ಇತರ ಶಾರೀರಿಕ ವ್ಯಾಯಾಮಗಳಂತೆ ಯೋಗಾಭ್ಯಾಸದಿಂದಲೂ ರೋಗವನ್ನು ದೂರವಿಡಲು ಮತ್ತು ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸಲು ಸಾಧ್ಯವಿದೆ. ಇಂದಿನ ಕ್ಷಿಪ್ರಗತಿಯ ಜೀವನದ ಓಟದಲ್ಲಿ ಯೋಗ ಶಿಕ್ಷಣಕ್ಕೆ ಬಹಳ ಪ್ರಾಧಾನ್ಯವಿದೆ. ಜೂನ್ 21 (ಇಪ್ಪತ್ತೊಂದು) ನೇ ತಾರೀಕಿನಂದು ಅಂತಾರಾಷ್ಟ್ರೀಯ ಯೋಗ ದಿನವಾಗಿ ಆಚರಿಸಲಾಗುತ್ತದೆ.

# ಕಲಿಕಾ ಕಣಜ



| ಕಲಿಕೋಪಕರಣಗಳು / ವೇದಿಕೆಗಳು | ಚಟುವಟಿಕೆಗಳು |
|---|---|
| ನೋಟು ಪುಸ್ತಕ | ಪ್ರವೇಶ ಚಟುವಟಿಕೆ, ಹಾಡುವ, ಉತ್ತರ ಬರೆಯಿರಿ, ಪದಗಳ ಅರ್ಥ ಕಂಡುಹಿಡಿಯುವ, ಆಶಯ ಬರೆಯುವ, ಪದ್ಯ ಮುಂದುವರಿಸುವ, ಸಂಗ್ರಹಿಸುವ, ಗಾದೆಮಾತುಗಳು, ಕ್ರಮೀಕರಿಸಿ ಬರೆಯುವ, ಸಮಾನಾರ್ಥ ಪದ, ಆಲ್ಬಂ ತಯಾರಿ, ಕತೆ ಬರೆಯುವ, ಅಭಿನಯಿಸುವ, ಸರಿಯಾದ ರೂಪವನ್ನು ಬರೆಯಿರಿ, ಕರಪತ್ರ ತಯಾರಿ, ಭಿತ್ತಿಪತ್ರ ತಯಾರಿ |
| ಪಠ್ಯಪುಸ್ತಕ | ಪ್ರವೇಶ ಚಟುವಟಿಕೆ, ಪದ್ಯ ಮುಂದುವರಿಸುವ, ಗಾದೆಮಾತುಗಳು, ಸಮಾನಾರ್ಥ ಪದ, ಸರಿಯಾದ ರೂಪವನ್ನು ಬರೆಯಿರಿ, ಪಾಠಭಾಗದ ಓದು |
| ದೃಶ್ಯಶ್ರಾವ್ಯ ಮಾಧ್ಯಮ | ಪದ್ಯ, ಲೇಖನ, ನಾಟಕ |
| ಭಿತ್ತಿಪತ್ರಿಕೆ | ರಚನೆಗಳು |
| ಪೋರ್ಟ್ ಫೋಲಿಯೋ | ರಚನೆಗಳು |
| ಬಾಲಸಭೆ / ಶಾಲಾ ಎಸೆಂಬ್ಲಿ / ಸಿ.ಪಿ.ಟಿ.ಎ. | ಪದ್ಯ, ನಾಟಕ |

# 7. ದುಡಿಯೋಣ ಉಣ್ಣೋಣ

"ದುಡಿಮೆಯೇ ದೇವರು" ಎಂಬ ಮಾತಿನಲ್ಲಿ ದುಡಿಮೆಯ ಹಿರಿಮೆ ಅಡಗಿದೆ. ಜನರ ದುಡಿಮೆಯಿಂದಾಗಿ ದೇಶವು ಸಮೃದ್ಧವಾಗುತ್ತದೆ. ನಮ್ಮಲ್ಲಿ ಕ್ಷೇತ್ರಗಳಲ್ಲಿ ದುಡಿಯುವ ಜನರಿದ್ದಾರೆ. ಎಲ್ಲಾ ಕೆಲಸಗಳಿಗೂ ಅದರದ್ದೇ ಆದ ಮಹತ್ವವಿದೆ; ಕೌಶಲ್ಯವಿದೆ. ವಿವಿಧ ಕೆಲಸಗಳನ್ನು ಮಾಡುವವರ ಕುರಿತು ತಿಳಿಯುವುದರೊಂದಿಗೆ ಅವರ ದುಡಿಮೆಯ ಬಗ್ಗೆ ನಾವು ಅಭಿಮಾನ ಪಡಬೇಕು.

ಬಸವಣ್ಣನವರ 'ಕಾಯಕವೇ ಕೈಲಾಸ' ಎಂಬ ಮಾತಿನಂತೆ ಒಂದಲ್ಲ ಒಂದು ರೀತಿಯ ದುಡಿಮೆಯಲ್ಲಿ ನಮ್ಮನ್ನು ನಾವು ತೊಡಗಿಸಿಕೊಳ್ಳಬೇಕು. ಆಲಸ್ಯವನ್ನು ತೊರೆದು ನಮ್ಮ ಅನ್ನವನ್ನು ನಾವೇ ಗಳಿಸಬೇಕು.

**ಇಲ್ಲಿ ನಾಲ್ಕು ಚಿತ್ರಗಳನ್ನು ಕೊಡಲಾಗಿದೆ. ಚಿತ್ರದಲ್ಲಿ ಅವರು ಯಾವ ಕಸುಬು ಮಾಡುತ್ತಿದ್ದಾರೆಂದು ಬರೆಯಿರಿ.**









# ಗಳಿಕೆಯೊಡನೆ ಕಲಿಕೆ




ಗೋಪು ಹನ್ನೆರಡನೇ ತರಗತಿಯಲ್ಲಿ ಕಲಿಯುತ್ತಿದ್ದನು. ವಾರ್ಷಿಕ ಪರೀಕ್ಷೆ ಕಳೆದು ಫಲಿತಾಂಶ ಪ್ರಕಟಗೊಂಡಿತು. ಗೋಪು ಪ್ರಥಮ ಸ್ಥಾನದಲ್ಲಿ ತೇರ್ಗಡೆಗೊಂಡಿದ್ದನು. "ಗೋಪೂ... ಓದನ್ನು ಅರ್ಧದಲ್ಲಿ ನಿಲ್ಲಿಸಬೇಡ. ನಿನಗೆ ಉತ್ತಮ ಭವಿಷ್ಯವಿದೆ" ಎಂದು ಗುರುಗಳು ಅವನನ್ನು ಹುರಿದುಂಬಿಸಿದರು.

ಮುಂದಿನ ಓದಿನ ಕನಸು ಕಾಣುತ್ತ ಗೋಪು ಮನೆಗೆ ಹಿಂತಿರುಗಿದನು. "ಅಮ್ಮಾ ನಾನು ಎಲ್ಲರಿಗಿಂತ ಹೆಚ್ಚು ಅಂಕ ಗಳಿಸಿ ಪಾಸಾಗಿದ್ದೇನೆ. ನನಗೆ ಮುಂದಕ್ಕೆ ಓದಬೇಕು. ಗುರುಗಳು ಒತ್ತಾಯಿಸಿದ್ದಾರೆ" ಎಂದು ಉತ್ಸಾಹದಿಂದ ಅಮ್ಮನೊಡನೆ ಹೇಳಿದನು. "ನೀನು ಓದುವುದು ಸಂತೋಷದ ವಿಚಾರ. ಆದರೆ ತುಂಬಾ ದುಡ್ಡು ಬೇಕಲ್ಲ. ಸಂಜೆ ಅಪ್ಪನಲ್ಲಿ ಕೇಳಿ ನೋಡೋಣ" ಅಮ್ಮ ಹೇಳಿದರು.

ಅಪ್ಪ ಮನೆಗೆ ಬಂದಾಗ ಸಂಜೆಯಾಗಿತ್ತು. ಗೋಪು ತಂದೆಯೊಡನೆ ತನ್ನ ಫಲಿತಾಂಶದ ವಿಚಾರ ತಿಳಿಸಿ ಮುಂದಕ್ಕೆ ಓದುವ ತನ್ನ ಆಸೆಯನ್ನು ತಿಳಿಸಿದನು. ರಾತ್ರಿ ಊಟ ಮಾಡುತ್ತಿರುವಾಗ ಅಮ್ಮ ಅಪ್ಪನೊಡನೆ ಗೋಪುವನ್ನು ಮುಂದಕ್ಕೆ ಓದಿಸುವ ಬಗ್ಗೆ ಪ್ರಸ್ತಾಪಿಸಿದರು. "ನೀನು ಹೇಳುವುದು ಸರಿ, ದುಡ್ಡಿಗೇನು ಮಾಡಲಿ? ನಾನು ದುಡಿಯುವುದು ನಮ್ಮ ಹೊಟ್ಟೆ ಬಟ್ಟೆಗೆ ಸಾಕಾಗುವುದಿಲ್ಲವಲ್ಲಾ" ಎಂದರು. ಅವರ ಮಾತು ಸುಳ್ಳಾಗಿರಲಿಲ್ಲ.



ಅವರದ್ದು ತಂದೆ ತಾಯಿ ಮೂವರು ಮಕ್ಕಳನ್ನು ಒಳಗೊಂಡ ಕುಟುಂಬ. ಅಪ್ಪನ ದುಡಿಮೆಯಿಂದಲೇ ಬದುಕು ಸಾಗಬೇಕಿತ್ತು.

ಗೋಪುವಿನ ಗೆಳೆಯರಾದ ಕಿಟ್ಟ, ಹಮೀದ್, ಜಾನ್ ಮುಂದಿನ ಓದಿಗೆ ಕಾಲೇಜು ಸೇರುವುದೆಂದು ತೀರ್ಮಾನವಾಗಿತ್ತು. ಇವರೆಲ್ಲರಿಗಿಂತ ಹೆಚ್ಚು ಅಂಕ ಗಳಿಸಿದ ಗೋಪು ತೀರಾ ಬಡವ. ಕಲಿಯಬೇಕೆಂಬ ಆಸೆ ಇದ್ದರೂ ಹಣವಿಲ್ಲದೆ ಓದು ಹೇಗೆ ಮುಂದುವರಿದೀತು? ಅವನು ಅಪ್ಪನೊಡನೆ "ಎಷ್ಟು ಕಷ್ಟವಾದರೂ ತೊಂದರೆ ಇಲ್ಲ ಅಪ್ಪಾ, ನಾನು ಮುಂದಕ್ಕೆ ಓದಲೇಬೇಕು" ಎಂದು ಹೇಳಿದನು. ಅವನ ಆಸೆಗೆ ತಣ್ಣೀರೆರಚಲು ಅಪ್ಪನಿಗೆ ಮನಸ್ಸಾಗಲಿಲ್ಲ. "ನೀನು ಓದುವುದಕ್ಕೆ ನನ್ನ ಅಡ್ಡಿಯಿಲ್ಲ. ಆದರೆ ಓದಿನ ವೆಚ್ಚವನ್ನು ನೀನೇ ನೋಡಿಕೊಳ್ಳಬೇಕು" ಎಂದರು. "ಆಗಲಿ ಅಪ್ಪ, ನಾನು ಪ್ರಯತ್ನಿಸುತ್ತೇನೆ" ಗೋಪು ಉತ್ತರಿಸಿದನು. ಗೋಪು ಮನಸ್ಸಿನಲ್ಲೇ ಹಣ ಸಂಪಾದನೆಯ ಮಾರ್ಗವನ್ನು ನಿರ್ಧರಿಸಿಕೊಂಡು ಅಮ್ಮನೊಡನೆ "ಅಮ್ಮ ನಾನು ಈಗ ಬಂದು ಬಿಡುತ್ತೇನೆ" ಎಂದು ಹೇಳಿ ಹೊರಟನು. ಅಲ್ಲಿಂದ ಬಸ್ ನಿಲ್ದಾಣಕ್ಕೆ ಬಂದನು. ಅಲ್ಲಿರುವ ಪತ್ರಿಕಾ ಏಜೆಂಟರ ಬಳಿಗೆ ಹೋದನು. "ಸ್ವಾಮಿ, ನನಗೆ ಓದಬೇಕೆಂಬ ಆಸೆ ಇದೆ. ಅದಕ್ಕೆ ದುಡ್ಡು ಬೇಕು. ನಿಮ್ಮಲ್ಲಿ ದಿನಕ್ಕೆ ಒಂದೆರಡು ಗಂಟೆ ಕೆಲಸ ಮಾಡಲು ನಾನು ಸಿದ್ಧನಿದ್ದೇನೆ. ದಯವಿಟ್ಟು ಸಹಾಯ ಮಾಡುವಿರಾ?" ಎಂದು ಗೋಪು ದೈನ್ಯದಿಂದ ಕೇಳಿದನು. ಪತ್ರಿಕಾ ಏಜೆಂಟರು ಗೋಪುವಿನಲ್ಲಿ ಅವನು ಪರೀಕ್ಷೆಯಲ್ಲಿ ಗಳಿಸಿದ ಅಂಕ, ಅವನ ಮನೆಯ ಸ್ಥಿತಿಗತಿಗಳನ್ನು ತಿಳಿದುಕೊಂಡು ಕೆಲಸ ಕೊಡಲು ತೀರ್ಮಾನಿಸಿದರು. ಬಳಿಕ ಗೋಪುವಿನೊಡನೆ "ನಿಯತ್ತಿನಿಂದ ಕೆಲಸ



ಮಾಡಬೇಕು. ಒಂದು ದಿನವೂ ಕೆಲಸಕ್ಕೆ ತಪ್ಪಿಸಬಾರದು. ಒಪ್ಪಿಗೆಯಾದರೆ ನಾಳೆ ಬೆಳಗ್ಗೆ ಸರಿಯಾಗಿ 6.30ಕ್ಕೆ ನೀನು ಇಲ್ಲಿಗೆ ಬರಬೇಕು. ಅಷ್ಟರಲ್ಲಿ ವಾರ್ತಾ ಪತ್ರಿಕೆಗಳು ಬಂದಿರುತ್ತವೆ. ಅವುಗಳಲ್ಲಿ ನಲುವತ್ತು, ಐವತ್ತು ಪತ್ರಿಕೆಗಳನ್ನು ಖಾಯಂ ಗಿರಾಕಿಗಳ ಮನೆಗೆ ತಲುಪಿಸಬೇಕು. ಯಾರಿಂದಲೂ ದೂರು ಬಾರದಂತೆ ಎಚ್ಚರ ವಹಿಸಬೇಕು" ಎಂದರು. ಗೋಪು ತಲೆಯಾಡಿಸಿ ಒಪ್ಪಿಗೆ ಸೂಚಿಸಿದನು. ತನ್ನ ಮುಂದಿನ ಓದಿಗೆ ದಾರಿಯೊಂದನ್ನು ಕಂಡುಕೊಂಡ ಗೋಪು ಸಂತೋಷದಿಂದ ಮನೆಗೆ ಹಿಂದಿರುಗಿದನು. ಅವನನ್ನು ಕಾಡುತ್ತಿದ್ದ ಚಿಂತೆ ದೂರವಾಗಿತ್ತು.

ಮರುದಿನ ಮುಂಜಾನೆಯಿಂದ ಗೋಪು ಕೆಲಸಕ್ಕೆ ಹೋಗತೊಡಗಿದನು. ಪತ್ರಿಕಾ ಏಜೆಂಟ್ ಗೋಪುವಿನೊಡನೆ "ಗೋಪು... ಈ ಹುಡುಗ ನಿನಗೆ ಪತ್ರಿಕೆ ವಿತರಿಸುವ ಮನೆಗಳನ್ನು ತೋರಿಸುತ್ತಾನೆ" ಎಂದರು. ಗೋಪು ಆ ಹುಡುಗನ ಜೊತೆಗೆ ಪತ್ರಿಕೆ ವಿತರಿಸಲು ಹೊರಟನು. ಬಹಳ ನಿಯತ್ತಿನಿಂದ ಕೆಲಸ ಮಾಡಿದನು. ಅವನ ಶ್ರದ್ಧೆ, ನಯ-ವಿನಯಗಳನ್ನು ಪತ್ರಿಕಾ ಏಜೆಂಟರು ಮೆಚ್ಚಿಕೊಂಡರು. ಗಿರಾಕಿಗಳು ಅವನನ್ನು ಇಷ್ಟಪಟ್ಟರು.

ಗೋಪುವಿನ ಸಂತೋಷ ಹೇಳತೀರದು. ಅವನು ಮುಂದಿನ ಶಿಕ್ಷಣಕ್ಕೆ ಕಾಲೇಜು ಸೇರಿದನು. ಆದರೂ ತನ್ನ ಗಳಿಕೆಯ ದಾರಿಯನ್ನು ಬಿಟ್ಟು ಬಿಡಲಿಲ್ಲ. ಮುಂಜಾನೆ ಎದ್ದು ಪತ್ರಿಕೆ ವಿತರಿಸಿ ಕಾಲೇಜಿಗೆ ಹೋಗುತ್ತಿದ್ದನು. ತಾನು ಗಳಿಸಿದ ಹಣದಿಂದ ತನಗೆ ಅಗತ್ಯವಿದ್ದಷ್ಟು ತೆಗೆದುಕೊಂಡು ಉಳಿದದ್ದನ್ನು ಹೆತ್ತವರಿಗೆ ಹಾಗೂ ತಂಗಿ ತಮ್ಮಂದಿರಿಗೆ ಕೊಡುತ್ತಿದ್ದನು. "ಮನಸ್ಸಿದ್ದರೆ ಮಾರ್ಗವಿದೆ" ಎಂಬುದನ್ನು ಗೋಪು ಸ್ವತಃ ತೋರಿಸಿಕೊಟ್ಟನು.

- ಪಳಕಳ ಸೀತಾರಾಮ ಭಟ್

ಪಳಕಳ ಸೀತಾರಾಮ ಭಟ್ಟರು ಕನ್ನಡದ ಖ್ಯಾತ ಮಕ್ಕಳ ಸಾಹಿತಿಗಳು ಮತ್ತು ಶಿಕ್ಷಕರು. ಈ ಕಥೆಯನ್ನು ಯುಗಪುರುಷ ಪ್ರಕಟಣಾಲಯವು ಪ್ರಕಟಿಸಿದ ಪಳಕಳ ಸೀತಾರಾಮ ಭಟ್ಟರ 'ಪಳಕಳರ ಕಥಾಸಂಪುಟ' ದಿಂದ ಆರಿಸಲಾಗಿದೆ.

## ಚಟುವಟಿಕೆಗಳು

### ಉತ್ತರಿಸಿರಿ

1. ಗುರುಗಳು ಗೋಪುವನ್ನು ಹೇಗೆ ಹುರಿದುಂಬಿಸಿದರು?
2. ಉತ್ತಮ ಅಂಕಗಳೊಂದಿಗೆ ತೇರ್ಗಡೆಯಾದ ಗೋಪು ತನ್ನ ಅಮ್ಮನಲ್ಲಿ ಏನೆಂದು ಹೇಳಿದನು?
3. ಗೋಪು ಅಪ್ಪನೊಡನೆ "ನಾನು ಮುಂದಕ್ಕೆ ಓದಲೇಬೇಕು" ಎಂದು ಹೇಳಿದಾಗ ಅಪ್ಪ ಏನು ಹೇಳಿದರು?
4. ಗೋಪು ತನ್ನ ಮುಂದಿನ ಓದಿಗಾಗಿ ಕಂಡುಕೊಂಡ ದಾರಿ ಯಾವುದು?

**ಈ ಕೆಳಗೆ ಕೊಟ್ಟಿರುವ ಮಾತುಗಳನ್ನು ಯಾರು ಯಾರಿಗೆ ಹೇಳಿದರು?**

- "ನೀನು ಹೇಳುವುದು ಸರಿ. ದುಡ್ಡಿಗೇನು ಮಾಡಲಿ? ನಾನು ದುಡಿಯುವುದು ನಮ್ಮ ಹೊಟ್ಟೆ ಬಟ್ಟೆಗೆ ಸಾಕಾಗುವುದಿಲ್ಲವಲ್ಲಾ."
- "ನಿಯತ್ತಿನಿಂದ ಕೆಲಸ ಮಾಡಬೇಕು. ಒಂದು ದಿನವೂ ಕೆಲಸಕ್ಕೆ ತಪ್ಪಿಸಬಾರದು."
- "ಸ್ವಾಮೀ, ನನಗೆ ಓದಬೇಕೆಂಬ ಆಸೆ. ಅದಕ್ಕೆ ದುಡ್ಡು ಬೇಕು. ನಿಮ್ಮಲ್ಲಿ ಕೆಲಸ ಮಾಡಲು ಸಿದ್ಧನಿದ್ದೇನೆ."

**ಪದ ಹುಡುಕಿರಿ**

ಕೆಳಗೆ ಕೊಟ್ಟಿರುವ ಪದಗಳಿಗೆ ಸಮಾನಾರ್ಥ ಪದಗಳನ್ನು ಪಾಠದಿಂದ ಹುಡುಕಿ ಬರೆಯಿರಿ.

- ಆದಾಯ - ..............................
- ಉತ್ತೀರ್ಣ - ..............................
- ಕಾಯಕ - ..............................
- ಹಣ - ..............................
- ತೀರ್ಮಾನಿಸು - ..............................
- ಪ್ರಾಮಾಣಿಕತೆ - ..............................
- ಗ್ರಾಹಕರು - ..............................

ಕೆಳಗೆ ಕೊಟ್ಟಿರುವ ದುಡಿತಕ್ಕೆ ಸಂಬಂಧಿಸಿದ ಅಪೂರ್ಣ ಗಾದೆಗಳನ್ನು ಪೂರ್ತಿಗೊಳಿಸಿರಿ.

- ಕೈ ಕೆಸರಾದರೆ ..............................................
- ಮಾತು ಕಡಿಮೆ ............................................
- ಕಾಯಕವೇ ..................................................
- ಕುಳಿತು ಉಣ್ಣುವವನಿಗೆ ................................................

## ಪದಸೂರ್ಯ

ನಿಮಗೆ ಗೊತ್ತಿರುವ ವಾರ್ತಾಪತ್ರಿಕೆಗಳ ಹೆಸರು ಬರೆದು ಪದಸೂರ್ಯವನ್ನು ಪೂರ್ತಿಗೊಳಿಸಿರಿ.




## ಪ್ರಶ್ನಾವಳಿ ತಯಾರಿಸಿರಿ

ಈ ಕೆಳಗೆ ಕೊಟ್ಟಿರುವ ಪಟ್ಟಿಯಿಂದ ನಿಮ್ಮ ಪ್ರದೇಶದಲ್ಲಿರುವ ಯಾವುದಾದರೂ ಓರ್ವ ಕಸುಬುದಾರರನ್ನು ಸಂದರ್ಶಿಸಿ ಅವರ ಕಸುಬಿನ ಬಗ್ಗೆ ತಿಳಿಯಲು ಪ್ರಶ್ನಾವಳಿ ತಯಾರಿಸಿರಿ.

- ಕಬ್ಬಿಣದ ಕೆಲಸ ಮಾಡುವವರು
- ಮರದ ಕೆಲಸ ಮಾಡುವವರು
- ನೇಯ್ಗೆಯವರು
- ಮಡಕೆ ತಯಾರಿಸುವವರು
- ದರ್ಜಿ

## ಸ್ವಂತ ವಾಕ್ಯದಲ್ಲಿ ಬಳಸಿರಿ.

ಕೆಳಗೆ ಕೊಟ್ಟಿರುವ ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿರಿ.

- ಹುರಿದುಂಬಿಸು -
- ಒತ್ತಾಯಿಸು -
- ಪ್ರಯತ್ನಿಸು -
- ಮೆಚ್ಚಿಕೊಳ್ಳು -
- ತೀರ್ಮಾನಿಸು -

## ಅಡಗಿರುವುದೇನು?

ಕೆಳಗೆ ಕೊಟ್ಟಿರುವ ಕೋಣೆಗಳಲ್ಲಿ ನಿತ್ಯ ಬಳಕೆಯ ವಸ್ತುಗಳು ಅಡಗಿವೆ. ಅವುಗಳನ್ನು ಹುಡುಕಿ ಬರೆಯಿರಿ.

| | | | | |
|---|---|---|---|---|
| ಕ | ಹಾ | ಕ್ಕಾ | ಸು | ತ್ತಿ |
| ಪಿ | ಮ | ಲುಂ | ರೆ | ಬೆಂ |
| ಗೆ | ಬು | ಕು | ಚು | ಮೇ |
| ರ | ಸೆ | ಕಿ | ಡಿ | ಟ್ಟಿ |
| ಜು | ಸೀ | ರ್ಚಿ | ಕೆ | ಗಿ |

- ____________________
- ____________________
- ____________________
- ____________________
- ____________________
- ____________________

ಓದಿರಿ

# ಜನಸೇವಕರು



ಅಕ್ಷರಗಳ ತಿದ್ದಿ ತೀಡಿ
ಶಿಕ್ಷಣವ ಮುದದಿ ನೀಡಿ
ವಿದ್ಯೆ ಬುದ್ಧಿ ಹೇಳಿಕೊಟ್ಟ
ಶಿಕ್ಷಕರೆ ನಿಮಗೆ ನಮನ



ಕೊರೆವ ಚಳಿಯ ಸಹಿಸಿಕೊಂಡು
ಹಿಮದ ರಾಶಿಯಲ್ಲಿ ಮಿಂದು
ದೇಶರಕ್ಷೆಗಾಗಿ ದುಡಿವ
ಸೈನಿಕರೆ ನಿಮಗೆ ನಮನ




ಅಗ್ನಿಜ್ವಾಲೆ ಹಬ್ಬಿದಾಗ
ನೀರಿನಲ್ಲಿ ಮುಳುಗಿದಾಗ
ಪರರ ರಕ್ಷೆ ಮಾಡುತಿರುವ
ಅಗ್ನಿ ರಕ್ಷಕರಿಗೆ ನಮನ



ಕಳ್ಳಕಾಕರನ್ನು ಹಿಡಿದು
ದುಷ್ಟರನ್ನು ನಿಗ್ರಹಿಸಿ
ನೀತಿ ನಿಯಮ ಪೊರೆಯುತಿರುವ
ನಿಯಮಪಾಲಕರಿಗೆ ನಮನ



ಉರಿವ ಬಿಸಿಲು ಸುರಿವ ಮಳೆಗೆ
ಮನೆಮನೆಗಳ ಹುಡುಕಿ ಅಲೆದು
ಓಲೆಗಳನು ಹಂಚುತಿರುವ
ಅಂಚೆ ಅಣ್ಣ ನಿನಗೆ ನಮನ



ನೋವು ಕಷ್ಟ ಲೆಕ್ಕಿಸದೆ
ಸಹನೆಯಿಂದ ಸೇವೆಗೈವ
ಎಲ್ಲರಿಗೂ ನಮ್ಮ ನಮನ
ಜನರ ಸೇವಕರಿಗೆ ನಮನ

# ಕರಕುಶಲ ಬದುಕು

(ಬುಟ್ಟಿ ತಯಾರಿಸುವ ನಮ್ಮೂರಿನ ಸುಶೀಲಕ್ಕನನ್ನು ಸಂದರ್ಶಿಸಿದಾಗ ಲಭಿಸಿದ ಮಾಹಿತಿಯನ್ನು ಇಲ್ಲಿ ನೀಡಲಾಗಿದೆ.)

ಸುಶೀಲ : ಬನ್ನಿ ಸಾರ್, ಚೆನ್ನಾಗಿದ್ದೀರಾ? ಏನು ವಿಶೇಷ?

ಗೋಪಾಲ : ನಾನು ಚೆನ್ನಾಗಿದ್ದೇನೆ. ನೀವು ಹೇಗಿದ್ದೀರಿ?

ಸುಶೀಲ : ಚೆನ್ನಾಗಿದ್ದೇವೆ. ಏನು ಬಂದಿರಿ ಸಾರ್?

ಗೋಪಾಲ : ಬುಟ್ಟಿ ತಯಾರಿಯ ಬಗ್ಗೆ ತಿಳಿಯಬೇಕಿತ್ತು.

ಸುಶೀಲ : ಅದಕ್ಕೇನಂತೆ ಕೇಳಿ, ನನಗೆ ಗೊತ್ತಿರುವುದನ್ನು ಹೇಳುತ್ತೇನೆ.

ಗೋಪಾಲ : ನೀವು ಯಾವ ಯಾವ ತರದ ಬುಟ್ಟಿ ತಯಾರಿಸುತ್ತೀರಿ?

ಸುಶೀಲ : ಗೊಬ್ಬರದ ಬುಟ್ಟಿ, ಮಣ್ಣಿನ ಬುಟ್ಟಿ ಅಲ್ಲದೆ "ಕುರುವೆ"ಗಳನ್ನೂ ತಯಾರಿಸುತ್ತೇವೆ.



| | | |
|---|---|---|
| ಗೋಪಾಲ | : | ಕುರುವೆಗಳೆಂದರೇನು? |
| ಸುಶೀಲ | : | ಕಾಡಿನ ಬಳ್ಳಿಗಳನ್ನು ಸಿಗಿದು ನಯಗೊಳಿಸಿ ಹೆಣೆದು ಮಾಡುವುದು ಕುರುವೆ. ಅನ್ನದ ಕುರುವೆ, ಅಡಿಕೆ ಹೆಕ್ಕುವ ಬಕೆಟ್ ನ ಆಕಾರದ ಗಾಳದ ಕುರುವೆ, ತರಕಾರಿ ಹಾಕಿಡುವ ಕುರುವೆ, ತಿಂಡಿಗಳನ್ನು ಹಾಕಿಡಲು ಉಪಯೋಗಿಸುವ ಕುರುವೆ ಇತ್ಯಾದಿ. ಗೊಬ್ಬರದ ಬುಟ್ಟಿ, ಮಣ್ಣಿನ ಬುಟ್ಟಿಗಳಿಗೆ ಬಳ್ಳಿಗಳನ್ನು ನಯಗೊಳಿಸಬೇಕಾಗಿಲ್ಲ. |
| ಗೋಪಾಲ | : | ಈ ಬುಟ್ಟಿಗಳನ್ನು ತಯಾರಿಸಲು ಯಾವ ಬಳ್ಳಿಗಳನ್ನು ಬಳಸುತ್ತೀರಿ? |
| ಸುಶೀಲ | : | ಮಾದೆರು ಬಳ್ಳಿ, ಎಂಜಿರು ಬಳ್ಳಿ, ಚೆನ್ನರ ಬಳ್ಳಿ, ನೆಡಿಲುಕೋಲು ಎಂಬಿತ್ಯಾದಿಗಳನ್ನು ಬಳಸುತ್ತೇವೆ. |
| ಗೋಪಾಲ | : | ಚೆನ್ನರ ಬಳ್ಳಿಯಲ್ಲಿ ಮುಳ್ಳುಗಳಿವೆಯಲ್ಲಾ. |
| ಸುಶೀಲ | : | ಮುಳ್ಳುಗಳಿವೆ. ಆದರೆ ಮುಳ್ಳುಗಳನ್ನು ಕತ್ತಿಯಲ್ಲಿ ತೆಗೆದು, ಆಮೇಲೆ ಸಿಗಿದು ಬುಟ್ಟಿ ತಯಾರಿಸುತ್ತೇವೆ. ಚೆನ್ನರ ಬಳ್ಳಿ ಬುಟ್ಟಿ ತಯಾರಿಸಲು ಉತ್ತಮ. ಹೆಚ್ಚು ಬಾಳಿಕೆ ಬರುತ್ತದೆ. |
| ಗೋಪಾಲ | : | ಬೇರೆ ಏನೇನು ತಯಾರಿಸುತ್ತೀರಿ? |
| ಸುಶೀಲ | : | ತಟ್ಟೆಯಾಕಾರದ ಅನ್ನ ಬಸಿಯುವ "ಕುಡುಪು" ತಯಾರಿಸುತ್ತೇವೆ. ಅದಕ್ಕೆ ಪೇರೆಂಗಿಲು ಬಳ್ಳಿ ಬೇಕು. ಅದರ ಸಿಪ್ಪೆ ತೆಗೆದು ಕುಡುಪು ತಯಾರಿಸುತ್ತೇವೆ. ನನ್ನ ಮಾವ ಬಿದಿರಿನಿಂದ ಗೆರಸೆ ತಯಾರಿಸುತ್ತಿದ್ದರು. ಅವರು ಈಗ ಇಲ್ಲ. ನಮಗೆ ಯಾರಿಗೂ ಗೆರಸೆ ತಯಾರಿಸಲು ಗೊತ್ತಿಲ್ಲ. |
| ಗೋಪಾಲ | : | ಬುಟ್ಟಿ ತಯಾರಿಸುವ ಬಳ್ಳಿಯ ಉದ್ದವನ್ನು ಹೇಗೆ ಅಳತೆ ಮಾಡುತ್ತೀರಿ? |
| ಸುಶೀಲ | : | ಅಂದಾಜು ಅಳತೆಯಿಂದಲೇ ದೊಡ್ಡ ಹಾಗೂ ಸಣ್ಣ ಬುಟ್ಟಿಗಳನ್ನು ತಯಾರಿಸುತ್ತೇವೆ. |
| ಗೋಪಾಲ | : | ಒಂದು ದಿನದಲ್ಲಿ ಎಷ್ಟು ಬುಟ್ಟಿ ತಯಾರಿಸುತ್ತೀರಿ? |
| ಸುಶೀಲ | : | ಹೆಚ್ಚೆಂದರೆ ಎರಡು. ಆದರೆ ಬಳ್ಳಿ ಸಂಗ್ರಹಿಸಲು ಬೇರೆ ಸಮಯ ಕಂಡುಕೊಳ್ಳಬೇಕು. |
| ಗೋಪಾಲ | : | ಹೇಗೆ ಮಾರಾಟ ಮಾಡುತ್ತೀರಿ? |

| | | |
|---|---|---|
| ಸುಶೀಲ | : | ಅಗತ್ಯವಿದ್ದವರಿಗೆ ನಾವು ಸ್ವತಃ ಕೊಂಡೊಯ್ದು ಮಾರಾಟ ಮಾಡುತ್ತೇವೆ. ಕೆಲವು ಅಂಗಡಿಯವರೂ ನಮ್ಮಿಂದ ಖರೀದಿಸಿ ಮಾರಾಟ ಮಾಡುತ್ತಾರೆ. |
| ಗೋಪಾಲ | : | ಈ ಬುಟ್ಟಿಗಳು ಎಷ್ಟು ಸಮಯದ ವರೆಗೆ ಬಾಳಿಕೆ ಬರುತ್ತವೆ? |
| ಸುಶೀಲ | : | ಗೊಬ್ಬರದ ಬುಟ್ಟಿ ಜಾಗ್ರತೆಯಾಗಿಟ್ಟರೆ ಎರಡು ಮೂರು ವರ್ಷ. ಅನ್ನದ ಕುರುವೆ, ತಿಂಡಿಯ ಕುರುವೆ, ತರಕಾರಿ ಕುರುವೆಗಳಿಗೆ ಸೆಗಣಿ ಹಚ್ಚಿಡುವುದಿಲ್ಲ. ಉಳಿದ ಕುರುವೆಗಳಿಗೆ ಸೆಗಣಿ ಹಚ್ಚಿ ಇಡುವುದರಿಂದ ಹೆಚ್ಚು ಕಾಲ ಬಾಳಿಕೆ ಬರುತ್ತವೆ. ಸೀಳಿದ ಬಳ್ಳಿಗಳನ್ನು ನೀರಿನಲ್ಲಿ ನೆನೆಸಿಟ್ಟು ಬುಟ್ಟಿ ತಯಾರಿಸಿದರೆ, ಕೀಟಗಳಿಂದ ತೊಂದರೆಯಾಗುವುದಿಲ್ಲ. |
| ಗೋಪಾಲ | : | ಈಗ ನಿಮ್ಮಲ್ಲಿ ಯಾರೆಲ್ಲ ಈ ಕಸುಬು ಮಾಡುತ್ತಾರೆ? |
| ಸುಶೀಲ | : | ಹಿರಿಯರು ಒಂದಿಬ್ಬರು ಮಾತ್ರ. ಇಂದಿನ ಪೀಳಿಗೆಯವರಿಗೆ ಯಾರಿಗೂ ಈ ಕೆಲಸ ಗೊತ್ತಿಲ್ಲ. ಶಾಲೆಗೆ ಹೋಗಿ ಕಲಿತ ಮೇಲೆ ಕೆಲವರು ಸಣ್ಣಪುಟ್ಟ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಹೆಚ್ಚಿನವರೂ ಕೂಲಿ ಕೆಲಸಕ್ಕೆ ಹೋಗುತ್ತಾರೆ. |
| ಗೋಪಾಲ | : | ಬುಟ್ಟಿ ತಯಾರಿಸಲು ಬೇಕಾದಷ್ಟು ಬಳ್ಳಿಗಳು ಸಿಗುತ್ತವೆಯೇ? |
| ಸುಶೀಲ | : | ನಮ್ಮೂರಲ್ಲಿ ಸಿಗುತ್ತದೆ. ಆದರೆ ಮೊದಲಿನಂತೆ ಕಾಡುಮೇಡು ಅಲೆದು ಬಳ್ಳಿ ಸಂಗ್ರಹಿಸಿ ಹೊತ್ತು ತರಲು ನಮಗೆ ತುಂಬಾ ಕಷ್ಟ. ಗಂಡಸರು ಬಳ್ಳಿ ಸಂಗ್ರಹಿಸಿದ ಜಾಗದಲ್ಲೇ ಕುಳಿತು ಬುಟ್ಟಿ ಹೆಣೆಯುತ್ತಾರೆ. ನಮಗೆ ಅದು ಸಾಧ್ಯವಾಗುವುದಿಲ್ಲ. |
| ಗೋಪಾಲ | : | ನಿಮ್ಮ ಮಕ್ಕಳು ಯಾರಾದರೂ ಈ ಕಸುಬು ಮುಂದುವರಿಸುತ್ತಾರೆಯೇ? |
| ಸುಶೀಲ | : | ಯಾರೂ ಇಲ್ಲ. ಈಗ ಎಲ್ಲದಕ್ಕೂ ಪ್ಲಾಸ್ಟಿಕ್, ಅಲ್ಯುಮೀನಿಯಂ, ಸ್ಟೀಲ್ ಗಳನ್ನು ಬಳಸುವುದರಿಂದ ನಮ್ಮ ಉತ್ಪನ್ನಗಳನ್ನು ಕೊಂಡುಕೊಳ್ಳುವವರು ಕಡಿಮೆ. ತಿಂಡಿ, ಅನ್ನ ಇತ್ಯಾದಿಗಳನ್ನು ಕಾಡುಬಳ್ಳಿಯ ಬುಟ್ಟಿಯಲ್ಲಿ ಹಾಕಿಡುವುದು ಆರೋಗ್ಯಕ್ಕೂ ಒಳ್ಳೆಯದು. ಈ ಬಳ್ಳಿಗಳಲ್ಲಿ ಔಷಧೀಯ ಗುಣವೂ ಇದೆ. |
| ಗೋಪಾಲ | : | ತುಂಬಾ ವಿಚಾರಗಳನ್ನು ತಿಳಿಸಿದಿರಿ. ಧನ್ಯವಾದಗಳು. |
| ಸುಶೀಲ | : | ತುಂಬಾ ಸಂತೋಷ. |

## ಚಟುವಟಿಕೆಗಳು

### ಉತ್ತರಿಸಿರಿ

1. ಸುಶೀಲಕ್ಕ ಯಾವ ಯಾವ ತರದ ಬುಟ್ಟಿಗಳನ್ನು ತಯಾರಿಸುತ್ತಾರೆ?
2. ಕುರುವೆ ಎಂದರೇನು?
3. ಬುಟ್ಟಿಗಳನ್ನು ತಯಾರಿಸಲು ಯಾವ ಯಾವ ಬಳ್ಳಿಗಳನ್ನು ಬಳಸುತ್ತೀರಿ?
4. ಯಾವ ಬಳ್ಳಿಯಿಂದ ತಯಾರಿಸಿದ ಬುಟ್ಟಿ ಹೆಚ್ಚು ಬಾಳಿಕೆ ಬರುವುದು?
5. ಕುಡುಪು ಹೇಗಿರುತ್ತದೆ? ಯಾಕೆ ಬಳಸುತ್ತಾರೆ?
6. ಕುಡುಪು ಯಾವ ಬಳ್ಳಿಯಿಂದ ತಯಾರಿಸುತ್ತಾರೆ?

### ಕೆಳಗೆ ಕೊಟ್ಟಿರುವ ಪದಗಳನ್ನು ವಿಂಗಡಿಸಿ ಬರೆಯಿರಿ.

ಮಾದರಿ :

- ಚೆನ್ನಾಗಿದ್ದೀರಾ - ಚೆನ್ನಾಗಿ + ಇದ್ದೀರಾ
- ಮುಳ್ಳುಗಳಿವೆಯಲ್ಲಾ - .................... + .....................
- ಕೊಂಡೊಯ್ದು - .................... + .....................

### ಪಾಠಭಾಗದಲ್ಲಿ ಇಂತಹ ಹಲವಾರು ಪದಗಳಿವೆ. ಅವುಗಳನ್ನು ಕಂಡುಹಿಡಿದು ವಿಂಗಡಿಸಿ ಬರೆಯಿರಿ.

ಉದಾ : ಹೆಚ್ಚೆಂದರೆ

### ಆವರಣದಲ್ಲಿರುವ ಪದದ ಸರಿಯಾದ ರೂಪವನ್ನು ಬಿಟ್ಟ ಸ್ಥಳದಲ್ಲಿ ಬರೆಯಿರಿ.

ಒಂದು ..................(ಊರು) ಒಬ್ಬ ಸಿರಿವಂತನಿದ್ದನು. ..................(ಅವನು) ಮೂವರು ಮಕ್ಕಳಿದ್ದರು. ಅವರು ಯಾವ ........... (ಕೆಲಸ) ಮಾಡುತ್ತಿರಲಿಲ್ಲ. ಸಿರಿವಂತ ತನ್ನ ..........(ಮಕ್ಕಳು) ಯೋಗ್ಯನಾದವನನ್ನು ಆಯ್ಕೆ ..............(ಮಾಡು) ಒಂದು ಪರೀಕ್ಷೆ ............. (ನಡೆಸು) ತೀರ್ಮಾನಿಸಿದನು.

## ಪದ್ಯ ಬರೆಯುವ

ಕೊಟ್ಟಿರುವ ಸಾಲುಗಳನ್ನು ಪೂರ್ತಿಗೊಳಿಸಿ ಪದ್ಯ ಬರೆಯಿರಿ.

ಎಲ್ಲರೊಂದುಗೂಡಿ ಬನ್ನಿ
ಕೆಲಸ ಮಾಡುವ
ನಮ್ಮ ಮನೆಯ ಕೆಲಸವನ್ನು
ನಾವೇ ಮಾಡುವ

ಕಸವ ..................
.................. ಒರೆಸಿ
ಬಟ್ಟೆ ..................
.................. ತಂದು
ಪಾತ್ರೆ..................
ಸ್ವಚ್ಛ..................
ನಮ್ಮ ಮನೆಯ .....................
................................................

ಮಣ್ಣು..........................
.......................... ಬಿತ್ತಿ
.......................... ಕೀಳುವ
ಬೂದಿ ..........................
ಬೇಲಿ ..........................
ಗಿಡವ ಕಾಯುವ
ನಮ್ಮ ಮನೆಯ .....................
................................................

## ಆತ್ಮಕಥೆ ಬರೆಯಿರಿ

'ಕರಕುಶಲ ಬದುಕು' ಪಾಠವನ್ನು ಓದಿದಿರಲ್ಲವೇ. ಬುಟ್ಟಿ ತಯಾರಿಯ ಬಗ್ಗೆ ಪಾಠಭಾಗದಲ್ಲಿ ಕಲಿತಿರುವಿರಿ. 'ಬುಟ್ಟಿಯ' ಆತ್ಮಕಥೆಯನ್ನು ಬರೆಯಿರಿ.

# ಕಲಿಕಾ ಕಣಜ



| ಕಲಿಕೋಪಕರಣಗಳು / ವೇದಿಕೆಗಳು | ಚಟುವಟಿಕೆಗಳು |
|---|---|
| ನೋಟು ಪುಸ್ತಕ | ಪ್ರವೇಶ ಚಟುವಟಿಕೆ, ಉತ್ತರಿಸಿರಿ, ಪದ ಹುಡುಕಿರಿ, ಯಾರು ಯಾರಿಗೆ ಹೇಳಿದರು, ಗಾದೆಗಳು, ಪದಸೂರ್ಯ, ಪ್ರಶ್ನಾವಳಿ ತಯಾರಿಸಿರಿ, ಅಡಗಿರುವುದೇನು, ಸ್ವಂತವಾಕ್ಯದಲ್ಲಿ ಬಳಸಿರಿ, ಪದ ವಿಂಗಡಿಸಿರಿ, ಪದ್ಯ ಬರೆಯುವ, ಸರಿಪಡಿಸಿ ಬರೆಯುವ, ಆತ್ಮಕಥೆ. |
| ಪಠ್ಯಪುಸ್ತಕ | ಪ್ರವೇಶ ಚಟುವಟಿಕೆ, ಪದ ಹುಡುಕಿರಿ, ಪದಸೂರ್ಯ, ಗಾದೆಗಳು, ಅಡಗಿರುವುದೇನು, ಸ್ವಂತವಾಕ್ಯದಲ್ಲಿ ಬಳಸಿರಿ, ಪದ ವಿಂಗಡಿಸಿರಿ, ಪದ್ಯ ಬರೆಯುವ, ಸರಿಪಡಿಸಿ ಬರೆಯುವ, ಪಾಠಭಾಗದ ಓದು |
| ದೃಶ್ಯಶ್ರಾವ್ಯ ಮಾಧ್ಯಮ | ಲೇಖನ, ಪದ್ಯ, ಸಂಭಾಷಣೆ, ಕಥೆ |
| ಭಿತ್ತಿಪತ್ರಿಕೆ | ರಚನೆಗಳು |
| ಪೋರ್ಟ್ ಫೋಲಿಯೋ | ರಚನೆಗಳು |
| ಬಾಲಸಭೆ / ಶಾಲಾ ಎಸೆಂಬ್ಲಿ/ ಸಿ.ಪಿ.ಟಿ.ಎ. | ಪದ್ಯ, ಸಂಭಾಷಣೆ, ಕಥೆ |

# 8. ನಾಡಿಗಾಗಿ

ವಿವಿಧತೆಯಲ್ಲಿ ಏಕತೆಯಿಂದ ಮೆರೆಯುತ್ತಿರುವ ರಾಷ್ಟ್ರ ನಮ್ಮದು. ಶ್ರೀಮಂತ ಸಂಸ್ಕೃತಿಯನ್ನು ಹೊಂದಿರುವ ನಮ್ಮ ರಾಷ್ಟ್ರದ ಬಗ್ಗೆ ನಾವು ಅಭಿಮಾನವನ್ನು ತಾಳಬೇಕು. ವಿಶ್ವಮಾನವತೆಯ ಸಂದೇಶವನ್ನು ಜಗತ್ತಿಗೆ ಸಾರಿದ ಹಿರಿಮೆ ನಮ್ಮದು.

ಉತ್ತಮ ಸಮಾಜವು ಸದೃಢ ರಾಷ್ಟ್ರದ ಬುನಾದಿ. ಸಮಾಜಸೇವೆ ಮತ್ತು ರಾಷ್ಟ್ರಸೇವೆ ಒಂದೇ ನಾಣ್ಯದ ಎರಡು ಮುಖಗಳಾಗಿವೆ. ಸಮಾಜದ ಒಳಿತಿಗಾಗಿ, ರಾಷ್ಟ್ರದ ಒಳಿತಿಗಾಗಿ ಪ್ರತಿಫಲ ಬಯಸದೆ ನಿಸ್ವಾರ್ಥವಾಗಿ ಸೇವೆಗೈದವರು ಅದೆಷ್ಟೋ ಮಂದಿ ಇದ್ದಾರೆ. ಇಂತಹ ಮಹಾನ್ ವ್ಯಕ್ತಿಗಳ ತ್ಯಾಗಪೂರ್ಣ ಜೀವನವು ನಮಗೆಲ್ಲರಿಗೂ ಆದರ್ಶಪ್ರಾಯವಾಗಿದೆ.

ಹಲವಾರು ಸಮಾಜಸೇವಾ ಸಂಘಟನೆಗಳು ಶಾಲೆಗಳಲ್ಲೂ, ಸಮಾಜದಲ್ಲೂ ಕಾರ್ಯವೆಸಗುತ್ತಿವೆ. ಆ ಸಂಘಟನೆಗಳ ಕುರಿತು ತಿಳಿಯುವುದರೊಂದಿಗೆ ನಾವೂ ಸಮಾಜ ಸೇವೆಯಲ್ಲಿ ಪಾಲ್ಗೊಳ್ಳೋಣ.

**ಇಲ್ಲಿ ಕೆಲವು ಸಮಾಜ ಸುಧಾರಕರ ಮತ್ತು ದೇಶಭಕ್ತರ ಚಿತ್ರಗಳನ್ನು ಕೊಡಲಾಗಿದೆ. ಚಿತ್ರವನ್ನು ಗುರುತಿಸಿ ಹೆಸರು ಬರೆಯಿರಿ.**









# ಸ್ಕೌಟ್ ಗೈಡ್ ಚಳುವಳಿ



ಸ್ಕೌಟ್ ಚಳುವಳಿಯನ್ನು ಆರಂಭಿಸಿದವರು ರಾಬರ್ಟ್ ಸ್ಟೀಫನ್ ಸನ್ ಸ್ಮಿತ್ ಬೇಡನ್ ಪವೆಲ್. ಇವರು 1857 ಫೆಬ್ರವರಿ 22ರಂದು ಲಂಡನ್ ನಗರದ ಸ್ಟೇನ್ ಪೋಲ್ ನಲ್ಲಿ ಜನಿಸಿದರು. ಇವರ ತಂದೆ ಎಚ್.ಜಿ. ಬೇಡನ್ ಪವೆಲ್. ತಾಯಿ ಹೆನ್ರಿಟಾ ಸ್ಮಿತ್ ಗ್ರೇಸ್.

ಬಿ.ಪಿ ಯೆಂದು ಕರೆಯಲ್ಪಡುವ ಇವರು ತಮ್ಮ 19ನೇ ವಯಸ್ಸಿನಲ್ಲಿ ಇಂಗ್ಲೆಂಡಿನ ಸೈನ್ಯಕ್ಕೆ ಸೇರಿದರು. ಇವರ ಧೈರ್ಯ, ಸಾಹಸ, ಜಾಣ್ಮೆಗಳನ್ನು ಗುರುತಿಸಿದ ಬ್ರಿಟಿಷ್ ಸರಕಾರ ಇವರಿಗೆ ಸೈನ್ಯದ ಅತ್ಯುನ್ನತ ಪದವಿಯಾದ ಲೆಫ್ಟಿನೆಂಟ್ ಜನರಲ್ ಪದವಿಯನ್ನು ನೀಡಿ ಗೌರವಿಸಿತು.

1899 ರಲ್ಲಿ ಬಿ.ಪಿ.ಯವರು ದಕ್ಷಿಣ ಆಫ್ರಿಕಾದಲ್ಲಿದ್ದಾಗ ಬ್ರಿಟಿಷ್ ವಸಾಹತು ಆಗಿದ್ದ ಮೆಫೆಕಿಂಗ್ ಪಟ್ಟಣವನ್ನು ಅಲ್ಲಿನ ಮೂಲ ನಿವಾಸಿಗಳಾದ 'ಬೋವರ್' ಜನಾಂಗ ಮುತ್ತಿಗೆ ಹಾಕಿತು. ಹೀಗಾಗಿ ಅಲ್ಲಿರುವ ಜನರಿಗೆ ಆಹಾರ ಮತ್ತು ಅವಶ್ಯವಸ್ತುಗಳು ಸಿಗದಂತಾಯಿತು. ಈ ಸಂದರ್ಭದಲ್ಲಿ ಬಿ.ಪಿ.ಯವರು ತನ್ನ ಗೆಳೆಯನೊಂದಿಗೆ ಸೇರಿಕೊಂಡು ಬಾಲಕರ ತಂಡವನ್ನು ಸಿದ್ಧಗೊಳಿಸಿ, ಆ ಜನರಿಗೆ ಆಹಾರ ಮತ್ತು ಸಂದೇಶಗಳನ್ನು ಕಳುಹಿಸುವ ವ್ಯವಸ್ಥೆ ಮಾಡಿದರು. ಮಾತ್ರವಲ್ಲ ತನ್ನ ಸೈನ್ಯದೊಂದಿಗೆ 'ಬೋವರ್' ಜನಾಂಗದೊಡನೆ





ಇನ್ನೂರ ಹದಿನೇಳು ದಿನಗಳ ಕಾಲ ಯುದ್ಧಮಾಡಿ ಜಯಗಳಿಸಿದರು. ತನ್ನಿಂದ ತರಬೇತಿ ಪಡೆದ ಬಾಲಕರ ಧೈರ್ಯ, ಸಾಹಸ, ಸತ್ಯನಿಷ್ಠೆ ಮತ್ತು ಪ್ರಾಮಾಣಿಕತೆಯು ಬಿ.ಪಿ.ಯವರಿಗೆ ಸ್ಕೌಟಿಂಗ್ ಆರಂಭಿಸಲು ಸ್ಫೂರ್ತಿಯಾಯಿತು.

1907 ಜುಲೈ ಮೂವತ್ತೊಂದರಿಂದ ಅಗೋಸ್ಟ್ ಎಂಟರವರೆಗೆ ಇಂಗ್ಲೀಷ್ ಕಾಲುವೆಯಲ್ಲಿರುವ ಬ್ರೌನ್ಸಿ ದ್ವೀಪದಲ್ಲಿ ಬಾಲಕರಿಗಾಗಿ ಬಿ.ಪಿ.ಯವರು ಒಂದು ಶಿಬಿರವನ್ನು ಏರ್ಪಡಿಸಿದರು. ಅದರಲ್ಲಿ ಇಪ್ಪತ್ತು ಬಾಲಕರು ಪಾಲ್ಗೊಂಡಿದ್ದರು. ಇದು ಮೊತ್ತಮೊದಲ ಸ್ಕೌಟ್ ಶಿಬಿರವೆಂದು ತಿಳಿಯಲಾಗುತ್ತದೆ. ಬ್ರೌನ್ಸಿ ದ್ವೀಪದ ಅನುಭವಗಳನ್ನು ಆಧರಿಸಿ ಬಿ.ಪಿ. ಯವರು 1908 ರಲ್ಲಿ "ಸ್ಕೌಟಿಂಗ್ ಫಾರ್ ಬಾಯ್ಸ್' ಎಂಬ ಪುಸ್ತಕವನ್ನು ಬರೆದರು.

1909 ರಲ್ಲಿ ಕ್ರಿಸ್ಟಲ್ ಅರಮನೆಯಲ್ಲಿ ನಡೆದ ಬಾಲಕರ ಸಮಾವೇಶದಲ್ಲಿ ಬಾಲಕಿಯರೂ ಸಮವಸ್ತ್ರ ಧರಿಸಿ ಪಾಲ್ಗೊಂಡಿದ್ದರು. ಅವರು ತಮ್ಮ ಸಹೋದರಿ ಆಗ್ನೆಸ್ ಪವೆಲರೊಂದಿಗೆ ಸಮಾಲೋಚಿಸಿ ಗರ್ಲ್ ಗೈಡ್ ಚಳುವಳಿಯನ್ನು ಹುಡುಗಿಯರಿಗಾಗಿ ಆರಂಭಿಸಿದರು.

ಹತ್ತುವರ್ಷ ಪೂರ್ತಿಯಾದ ಹುಡುಗರು ಸ್ಕೌಟ್ ಆಗಿಯೂ, ಹುಡುಗಿಯರು ಗೈಡ್ ಆಗಿಯೂ ಸಂಘಟನೆಯಲ್ಲಿ ಸದಸ್ಯರಾಗಬಹುದು. ನಮ್ಮ ದೇಶದಲ್ಲಿ ಹೆಚ್ಚಿನ ಎಲ್ಲಾ ಶಾಲೆಗಳಲ್ಲಿ ಸ್ಕೌಟಿಂಗ್ ಶಿಕ್ಷಣ ನೀಡಲಾಗುತ್ತಿದೆ. ಸ್ಕೌಟಿಂಗ್ ತರಬೇತಿ ಪಡೆದ ಅಧ್ಯಾಪಕರು (ಸ್ಕೌಟ್ ಮಾಸ್ಟರ್) ಹುಡುಗರಿಗೂ, ಅಧ್ಯಾಪಿಕೆ (ಗೈಡ್ ಕ್ಯಾಪ್ಟನ್) ಹುಡುಗಿಯರಿಗೂ ತರಬೇತಿ ನೀಡುತ್ತಾರೆ.

ಐದು ವರ್ಷದಿಂದ ಹತ್ತು ವರ್ಷದೊಳಗಿನ ಮಕ್ಕಳು ಈ ಸಂಘಟನೆಯ ಕಬ್, ಬುಲ್ ಬುಲ್ ಎಂಬ ವಿಭಾಗದಲ್ಲಿ ಒಳಪಡುತ್ತಾರೆ. ಹುಡುಗರನ್ನು 'ಕಬ್'ಗಳೆಂದೂ ಹುಡುಗಿಯರನ್ನು 'ಬುಲ್ ಬುಲ್'ಗಳೆಂದೂ ಕರೆಯುತ್ತಾರೆ.

ಸ್ಕೌಟಿಂಗ್‌ನ ನಿಯಮದ ಭಾಗಗಳಾದ ಪರೋಪಕಾರ, ನಂಬಿಕೆ, ನಿಷ್ಠೆ, ಸ್ನೇಹ ಸಹೋದರತೆ, ಪರಿಸರ ಪ್ರೇಮ, ಶಿಸ್ತುಪಾಲನೆ, ಮಿತವ್ಯಯ, ಧೈರ್ಯ ಇತ್ಯಾದಿಗಳನ್ನು ಆಟ ಮತ್ತು ಪಾಠಗಳ ಮೂಲಕ ಕಲಿಸಲಾಗುವುದು. ಪಂಚೇಂದ್ರಿಯಗಳಿಗೆ ಸಂಬಂಧಿಸಿದ ಆಟಗಳು, ಹೊರಾಂಗಣ ಆಟಗಳು, ಹಾಡು, ನೃತ್ಯ ಎಂಬಿವುಗಳೂ ಶಿಬಿರ ಚಟುವಟಿಕೆಯ ಭಾಗಗಳಾಗಿವೆ.

ಸ್ಕೌಟಿಂಗ್‌ನಲ್ಲಿ ಪ್ರಥಮ ಚಿಕಿತ್ಸೆಗೆ ಪ್ರಾಧಾನ್ಯವಿದೆ. ಕೈಕಾಲು ಮುರಿತಕ್ಕೆ ಬ್ಯಾಂಡೇಜ್ ಹಾಕುವುದು, ಗಾಯಗಳಿಗೆ ಹಾಗೂ ವಿಷಜಂತುಗಳ ಕಡಿತಕ್ಕೆ ಪ್ರಥಮ ಚಿಕಿತ್ಸೆ ನೀಡುವುದು, ಲಭ್ಯವಿರುವ ವಸ್ತುಗಳಿಂದ ಸ್ಟ್ರೆಚರ್ ತಯಾರಿಸುವುದು ಇತ್ಯಾದಿ ತರಬೇತಿಯನ್ನು ಮಕ್ಕಳಿಗೆ ನೀಡಲಾಗುವುದು.

ಒಟ್ಟಿನಲ್ಲಿ ಮಕ್ಕಳಿಗೆ ಸ್ಕೌಟಿಂಗ್ ಮೂಲಕ ಶಿಕ್ಷಣ ನೀಡುವುದರಿಂದ ಅವರನ್ನು ಉತ್ತಮ ವ್ಯಕ್ತಿಗಳಾಗಿ ರೂಪೀಕರಿಸಲು ಸಾಧ್ಯ ಎನ್ನುವುದರಲ್ಲಿ ಸಂದೇಹವಿಲ್ಲ.

## ಚಟುವಟಿಕೆಗಳು

**ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

1. ಸ್ಕೌಟ್ ಗೈಡ್ ಚಳುವಳಿಯನ್ನು ಆರಂಭಿಸಿದವರು ಯಾರು?
2. ಬಿ.ಪಿ. ಯವರ ತಂದೆ ತಾಯಿಯ ಹೆಸರೇನು?
3. ದಕ್ಷಿಣ ಆಫ್ರಿಕಾದ ಮೂಲನಿವಾಸಿಗಳ ಹೆಸರೇನು?
4. ಬಿ.ಪಿ.. ಯವರಿಗೆ ಸ್ಕೌಟಿಂಗ್ ಆರಂಭಿಸಲು ಸ್ಫೂರ್ತಿಯಾದ ವಿಚಾರ ಏನು?
5. ಬಿ.ಪಿ. ಯವರು ಬರೆದ ಪುಸ್ತಕದ ಹೆಸರೇನು?
6. ಸ್ಕೌಟ್ ಗೈಡ್ ಸಂಘಟನೆಯ ಸದಸ್ಯರಾಗಬೇಕಿದ್ದರೆ ಎಷ್ಟು ವರ್ಷ ಪೂರ್ತಿಯಾಗಿರಬೇಕು?

**ವಿಂಗಡಿಸಿ ಕೊಟ್ಟಿರುವ ಪದಗಳನ್ನು ಜೋಡಿಸಿ ಬರೆಯಿರಿ.**

- ಸದಸ್ಯರು + ಆಗಬಹುದು - ..................................
- ಅತಿ + ಉನ್ನತ - ..................................
- ಸಂಘಟನೆಯಲ್ಲಿ + ಇದ್ದು - ..................................
- ಪಂಚ + ಇಂದ್ರಿಯಗಳು - ..................................

**ಸಮಾಜದ ಒಳಿತಿಗಾಗಿ ಸೇವೆ ಮಾಡುವ ಹಲವಾರು ಸಂಘಟನೆಗಳು ನಮ್ಮ ಶಾಲಾ ಕಾಲೇಜುಗಳಲ್ಲಿವೆ. ಅವುಗಳನ್ನು ಪಟ್ಟಿ ಮಾಡಿರಿ.**

- ಸ್ಕೌಟ್ ಗೈಡ್ ಸಂಘಟನೆ
- ಎನ್.ಎಸ್.ಎಸ್.
- ..................................
- ..................................
- ..................................

**ಕೆಳಗೆ ಕೊಟ್ಟಿರುವ ವಾಕ್ಯಗಳನ್ನು ಕ್ರಮೀಕರಿಸಿ ಬರೆಯಿರಿ.**

1. 1857ರಲ್ಲಿ ಬೇಡನ್ ಪವೆಲರು ಲಂಡನ್ ನ ಸ್ಟೇನ್ ಪೋಲ್ ನಗರದಲ್ಲಿ ಜನಿಸಿದರು.
2. 1909ರಲ್ಲಿ ಕ್ರಿಸ್ಟಲ್ ಅರಮನೆಯಲ್ಲಿ ಸ್ಕೌಟ್ ಸಮಾವೇಶ ನಡೆಯಿತು.
3. 1908ರಲ್ಲಿ "ಸ್ಕೌಟಿಂಗ್ ಫಾರ್ ಬಾಯ್ಸ್" ಎಂಬ ಪುಸ್ತಕವನ್ನು ಬರೆದರು.
4. 1899ರಲ್ಲಿ ಸೈನ್ಯಾಧಿಕಾರಿಯಾಗಿದ್ದಾಗ ಬೋವರ್ ಜನಾಂಗದವರು ಬ್ರಿಟೀಷ್ ವಸಾಹತು ಆಗಿದ್ದ ಮೆಫೆಕಿಂಗ್ ಪಟ್ಟಣಕ್ಕೆ ಮುತ್ತಿಗೆ ಹಾಕಿದರು.
5. 19ನೇ ವಯಸ್ಸಿನಲ್ಲಿ ಲೆಫ್ಟಿನೆಂಟ್ ಜನರಲ್ ಪದವಿ ಪಡೆದರು.
6. 1907 ಜುಲೈ 31 ರಿಂದ ಅಗೋಸ್ಟ್ 8 ರವರೆಗೆ ಬ್ರೌನ್ಸಿ ದ್ವೀಪದಲ್ಲಿ ಬಾಲಕರಿಗಾಗಿ ಶಿಬಿರ ಏರ್ಪಡಿಸಿದರು.

# ಈ ಮಣ್ಣು ನಮ್ಮದು

ಈ ಮಣ್ಣು ನಮ್ಮದು
ಈ ಗಾಳಿ ನಮ್ಮದು
ಕಲಕಲನೆ ಹರಿಯುತಿಹ ನೀರು ನಮ್ಮದು
ಕಣಕಣದಲು ಭಾರತೀಯ ರಕ್ತ ನಮ್ಮದು ||ಪ||

ನಮ್ಮ ಕಾಯ್ವ ಹಿಮಾಲಯವು ತಂದೆ ಸಮಾನ
ಗಂಗೆ ತುಂಗೆ ಕಾವೇರಿಯು ತಾಯಿ ಸಮಾನ
ಈ ದೇಶದ ಜನರೆಲ್ಲರು ಸೋದರ ಸಮಾನ
ಈ ನಾಡಿನ ಹೃದಯವದು ದೈವ ಸನ್ನಿಧಾನ ||1||

ಅಜಂತ ಎಲ್ಲೋರ ಹಳೇಬೀಡು ಬೇಲೂರ
ಶಿಲೆಗಳಿವು ಕಲೆಯ ಆಗರ
ಹಿಂದು, ಬೌದ್ಧ, ಜೈನ, ಕ್ರೈಸ್ತ, ಮುಸಲ್ಮಾನ
ಧರ್ಮಗಳ ಮಹಾಸಾಗರ ||2||

ತಂಗಾಳಿಗೆ ತಲೆದೂಗುವ ಪೈರಿನ ಹಾಡು
ಆ ಹಾಡಿಗೆ ತಾಳ ಕೊಡುವ ಯಂತ್ರದ ಜಾಡು
ವಿಜ್ಞಾನವು ಅಜ್ಞಾನವ ಗೆಲ್ಲುವ ಪಾಡು
ಹೊಸ ಭಾರತ ನಿರ್ಮಾಣವು ಸಾಗಿದೆ ನೋಡು ||3||

- ಆರ್.ಎನ್. ಜಯಗೋಪಾಲ್

ಆರ್.ಎನ್. ಜಯಗೋಪಾಲ್ ಕನ್ನಡದ ಪ್ರಮುಖ ಚಿತ್ರ ಸಾಹಿತಿಗಳಲ್ಲಿ ಒಬ್ಬರು. ಗೀತ ರಚನೆ, ಚಿತ್ರ ಸಂಭಾಷಣೆ, ಚಲನಚಿತ್ರ ನಟನೆ, ನಿರ್ದೇಶನ ಹೀಗೆ ವಿವಿಧ ರಂಗಗಳಲ್ಲಿ ಪ್ರತಿಭಾನ್ವಿತರು.

## ಚಟುವಟಿಕೆಗಳು

**ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

1. ಮಣ್ಣು, ಗಾಳಿ, ನೀರು ಇತ್ಯಾದಿ ನಮ್ಮದು ಎಂಬ ಆಶಯ ಬರುವ ಪದ್ಯದ ಸಾಲುಗಳನ್ನು ಬರೆಯಿರಿ.
2. ಈ ಕವಿತೆಯಲ್ಲಿ ತಂದೆಗೆ ಸಮಾನ ಯಾವುದೆಂದು ಕವಿ ಬಣ್ಣಿಸಿದ್ದಾರೆ?
3. ಗಂಗೆ, ತುಂಗೆ, ಕಾವೇರಿಯು ಯಾರಿಗೆ ಸಮಾನ?
4. ಕಲೆಯ ಆಗರ ಯಾವುದು?
5. ಅಜ್ಞಾನವನ್ನು ಯಾವುದು ಗೆಲ್ಲುವುದು?

- **ಪದ್ಯದಿಂದ ಪ್ರಾಸಪದಗಳನ್ನು ಹುಡುಕಿ ಬರೆಯಿರಿ.**
- **ಕವಿತೆಯಲ್ಲಿ ನಿಮಗಿಷ್ಟವಾದ ಸಾಲು ಯಾವುದು? ಯಾಕೆ?**
- **ಕವಿತೆಯ ಆಶಯ ಬರೆಯಿರಿ.**

**ಅನುಕರಣ ವಾಚಕಗಳನ್ನು ಸಂಗ್ರಹಿಸಿರಿ.**

- ಕಲಕಲನೆ
- ಕಣಕಣದಲು
- 
- 
- 

**ಘೋಷವಾಕ್ಯ ಬರೆಯೋಣ**

ನಮ್ಮ ದೇಶದ ರಕ್ಷಣೆ ನಮ್ಮ ಕರ್ತವ್ಯವಲ್ಲವೇ? ಜನರಲ್ಲಿ ದೇಶಭಕ್ತಿಯನ್ನು ಮೂಡಿಸಲು ಘೋಷವಾಕ್ಯಗಳನ್ನು ಬರೆಯಿರಿ.

ಮಾದರಿ :



## ನಮ್ಮ ರಾಷ್ಟ್ರ

ಕೆಲವು ರಾಷ್ಟ್ರ ಮತ್ತು ರಾಜ್ಯ ಸಂಕೇತಗಳನ್ನು ಕೆಳಗೆ ನೀಡಲಾಗಿದೆ. ಅವುಗಳ ಕೆಳಗೆ ಕೊಟ್ಟಿರುವ ಕೋಣೆಯಲ್ಲಿ ವೃತ್ತದಿಂದ ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.







ರಾಷ್ಟ್ರಧ್ವಜ
ರಾಷ್ಟ್ರಲಾಂಛನ
ರಾಜ್ಯಪುಷ್ಪ
ರಾಷ್ಟ್ರಪಕ್ಷಿ
ರಾಷ್ಟ್ರಮೃಗ





## ವರದಿ ಬರೆಯೋಣ

ನಿಮ್ಮ ಶಾಲೆಯಲ್ಲಿ ಆಚರಿಸಿದ ಗಣರಾಜ್ಯೋತ್ಸವ ಕಾರ್ಯಕ್ರಮದ ವರದಿ ಬರೆಯಿರಿ.

# ನಮ್ಮ ನಾಡು

ನಮ್ಮ ನಾಡು ಭಾರತ
ನಮ್ಮ ಬೀಡು ಭಾರತ
ತಂತನಾನ ನಾನ| ತಂತನಾನ ನಾನ

ನಮ್ಮ ನಾಡಿನ್ನುನತಿ
ಮುಗಿಲೆತ್ತರ ಕೀರುತಿ
ದಶದಿಕ್ಕಿಗೆ ಮೊಳಗಲಿ
ದಿಗಂತದಲ್ಲಿ ಹರಡಲಿ
ತಂತನಾನ ನಾನ| ತಂತನಾನ ನಾನ

ಸತ್ಯಶಾಂತಿ ನ್ಯಾಯವು
ಜನಮನದಲಿ ತುಂಬಲಿ
ಅಹಿಂಸೆಯ ಸಂದೇಶವು
ಮನೆ ಮನೆ ಮಾತಾಗಲಿ
ತಂತನಾನ ನಾನ| ತಂತನಾನ ನಾನ

ತುತ್ತಿಗೆ ಗತಿಯಿಲ್ಲದ
ಸಾವಿರಾರು ಜನಗಳು
ಕಟ್ಟಿದ ಈ ದೇಶವನು
ಸಂಪನ್ನರು ಅರಿಯಲಿ
ತಂತನಾನ ನಾನ| ತಂತನಾನ ನಾನ

ಜಾತಿಯ ವಿಷಬೀಜವು
ಮಡಿಮೈಲಿಗೆ ರೋಗವು
ತರತಮಗಳು ಮರೆಯಲಿ
ಸಮಾನತೆಯು ತುಂಬಲಿ
ತಂತನಾನ ನಾನ| ತಂತನಾನ ನಾನ

- ಡಾ| ನಾ. ದಾ. ಶೆಟ್ಟಿ

# ಮೇರಿಕ್ಯೂರಿ



ಪ್ರತಿಯೊಬ್ಬ ವ್ಯಕ್ತಿಯ ಸಾಧನೆಯು ಇಡೀ ಮಾನವ ಕುಲಕ್ಕೆ ವರದಾನವಾಗಿದೆ. ಮೇರಿ ಕ್ಯೂರಿಯವರು ಅಂತಹ ಸಾಧನೆ ಮಾಡಿದ ಓರ್ವ ಮಹಾನ್ ಮಹಿಳಾ ವಿಜ್ಞಾನಿಯಾಗಿದ್ದಾರೆ.
ಮೇರಿ 1867 ನವಂಬರ್ 7 ರಂದು ಪೋಲೆಂಡಿನ ವಾರ್ಸಾದಲ್ಲಿ ಜನಿಸಿದಳು. ಮೇರಿಯ ತಂದೆ ಮತ್ತು ತಾಯಿ ಮಕ್ಕಳಿಗೆ ಉತ್ತಮ ಶಿಕ್ಷಣವನ್ನು ನೀಡಿದರು.

ದಿಟ್ಟ ಹುಡುಗಿಯರಾದ ಮೇರಿ ಮತ್ತು ಅಕ್ಕ ಬ್ರೋನ್ಯ ಉನ್ನತ ಶಿಕ್ಷಣ ಪಡೆಯಲು ಪ್ಯಾರಿಸಿಗೆ ತೆರಳಿದರು. ಹಲವು ಎಡರು ತೊಡರುಗಳನ್ನು ಎದುರಿಸಿದರೂ ಮೇರಿ ಏಕಾಗ್ರಚಿತ್ತದಿಂದ ಕಲಿತು ಉನ್ನತ ಸ್ಥಾನದೊಂದಿಗೆ ತೇರ್ಗಡೆಯಾದಳು. 1895 ಜುಲೈ 26 ರಂದು ಪ್ಯಾರಿಸಿನ ಶಾಲೆಯೊಂದರ ಭೌತಶಾಸ್ತ್ರ ಮತ್ತು ರಸಾಯನ ಶಾಸ್ತ್ರದ ಮುಖ್ಯಸ್ಥನಾದ ಪಿಯರಿ ಕ್ಯೂರಿಯನ್ನು ವಿವಾಹವಾದಳು.

ವಿಜ್ಞಾನ ರಂಗದ ಇತಿಹಾಸದಲ್ಲಿ ಸತಿಪತಿಯರ ಸಹಭಾಗಿತ್ವದಲ್ಲಿ ಹೊಸ ಅಧ್ಯಾಯ ಆರಂಭವಾಯಿತು. 1903 ರಲ್ಲಿ ಮೇರಿ ಮತ್ತು ಪಿಯರಿ ಕ್ಯೂರಿ ದಂಪತಿಗಳು ರಸಾಯನಶಾಸ್ತ್ರದ ನೋಬೆಲ್ ಬಹುಮಾನ ಪಡೆದರು. ಎಲ್ಲಾ ವರ್ಗದ ಜನರು ದಂಪತಿಗಳನ್ನು ಕಂಡು ಅಭಿನಂದಿಸಲು ಬಂದರು. ಜಗದ್ವಿಖ್ಯಾತಿ ಪಡೆದರೂ ಸರಳ ಸ್ವಭಾವಿಗಳಾದ ಅವರಿಬ್ಬರು ಜನರಿಂದ ತಪ್ಪಿಸಿಕೊಳ್ಳಲು ತಮ್ಮ ಸೈಕಲುಗಳನ್ನೇರಿ ಹಳ್ಳಿಗಳನ್ನು ಸುತ್ತಾಡಲು ಹೊರಟರು.

ದಂಪತಿಗಳಿಬ್ಬರೂ ನಾಲ್ಕು ವರ್ಷಗಳ ಕಡುಬಡತನವನ್ನು ಅನುಭವಿಸುತ್ತಾ ತಮ್ಮ ಸಂಶೋಧನೆಗಳಲ್ಲಿ ತೊಡಗಿಸಿಕೊಂಡರು. ಅವರಿಗೆ ವ್ಯವಸ್ಥಿತವಾದ ಪ್ರಯೋಗಶಾಲೆಯೂ ಇರಲಿಲ್ಲ. ಸಣ್ಣ ಮುರುಕು ಕೊಠಡಿಯಲ್ಲಿ ಪ್ರಯೋಗವನ್ನು ಮುಂದುವರಿಸಿ ಅಪೂರ್ವ ಮತ್ತು ಅಮೂಲ್ಯವಾದ 'ರೇಡಿಯಂ'ನ್ನು ಗುರುತಿಸಿದರು. ಹಗಲು ಜೀವನ ನಿರ್ವಹಣೆಗಾಗಿ ದುಡಿಯುತ್ತಿದ್ದರು. ನಂತರದ ಬಿಡುವಿನಲ್ಲಿ ಗಂಟೆಗಟ್ಟಲೆ ತಮ್ಮ ಹಳೆಯ ಮುರುಕು

ಕೊಠಡಿಯಲ್ಲಿ ತಮ್ಮ ಆರೋಗ್ಯವನ್ನೂ ಲೆಕ್ಕಿಸದೆ ದುಡಿದರು. ಕೊನೆಗೂ ಅವರ ಶ್ರಮಕ್ಕೆ ಜಯ ದೊರಕಿತು. ರೇಡಿಯಂ ಎಂಬ ಮೂಲಧಾತುವನ್ನು ಕಂಡುಹಿಡಿದರು.

ಅವರಿಬ್ಬರೂ ಮನಸ್ಸು ಮಾಡಿದ್ದರೆ ಅತ್ಯಮೂಲ್ಯವಾದ ರೇಡಿಯಂನ್ನು ಯಾವುದಾದರೂ ಲಾಭ ತರುವ ಸಂಸ್ಥೆಗೆ ಮಾರಿ ಕೋಟ್ಯಂತರ ಫ್ರಾಂಕ್ ಗಳನ್ನು ಗಳಿಸಬಹುದಾಗಿತ್ತು. ಒಂದೇ ಒಂದು ರುಜುವಿನಿಂದ ತಮ್ಮ ಬಡತನವನ್ನು ನೀಗಿಸಿಕೊಂಡು ಸಂತೃಪ್ತ ಜೀವನ ನಡೆಸಬಹುದಿತ್ತು. 'ಈ ಸಂಶೋಧನೆಯ ಸಾಮ್ಯವನ್ನು ಯಾರಿಗೂ ಮಾರುವುದಿಲ್ಲ. ಇದು ವಿಜ್ಞಾನ ರಂಗಕ್ಕೆ ಸೇರಿದ ಮಾಹಿತಿ. ಈ ಮಾಹಿತಿ ಇಡೀ ಮಾನವ ಕುಲದ ಸೊತ್ತು. ಇದನ್ನು ಹಣಕ್ಕಾಗಿ ಮಾರುವುದು ಸರಿಯಲ್ಲ' ಎನ್ನುವುದು ಅವರಿಬ್ಬರ ಒಮ್ಮತದ ಅಭಿಪ್ರಾಯವಾಗಿತ್ತು.

ದಂಪತಿಗಳು ರೇಡಿಯಂನ ಸಂಶೋಧನೆಯನ್ನು ಮುಂದುವರಿಸಿದರು. ಎಂಟು ವರ್ಷದ ಐರಿನ್ ಮತ್ತು ಒಂದೂವರೆ ವರ್ಷದ ಈವ್ ಎಂಬ ಹೆಣ್ಣು ಮಕ್ಕಳೊಂದಿಗೆ ಸುಖಜೀವನ ನಡೆಸುತ್ತಿರುವಾಗಲೇ 1906 ರ ಎಪ್ರಿಲ್ 19 ರಂದು ಮೇರಿಯ ಜೀವನದಲ್ಲಿ ದೊಡ್ಡ ದುರಂತ ಸಂಭವಿಸಿತು. ಪಿಯರ್ ರಸ್ತೆ ದಾಟಲು ಪ್ರಯತ್ನಿಸಿದಾಗ ಕುದುರೆಗಾಡಿಯೊಂದು ಹಿಂದಿನಿಂದ ಅಪ್ಪಳಿಸಿ ಪಿಯರ್ ಕೆಳಗೆ ಬಿದ್ದ. ಗಾಡಿಯ ಚಕ್ರ ತಲೆಯ ಮೇಲೆ ಬಿದ್ದು ಸ್ಥಳದಲ್ಲೇ ಅಸುನೀಗಿದ.



ಏಕಾಂಗಿನಿಯಾದ ಮೇರಿ ಕಾಲ ಕಳೆದಂತೆ ತನ್ನನ್ನು ಸಂಶೋಧನಾ ಕೆಲಸಗಳಲ್ಲಿ ತೊಡಗಿಸಿಕೊಂಡಳು. ಎರಡು ಬಾರಿ ನೋಬೆಲ್ ಪ್ರಶಸ್ತಿ ಪಡೆದ ಮಹಿಳೆ ಎಂಬ ಖ್ಯಾತಿ ಪಡೆದಳು. ಅನಾರೋಗ್ಯದ ನಡುವೆಯೂ ತನ್ನ ಕಡೆಯ ದಿನಗಳಲ್ಲೂ 'ಅಕ್ಟೀನಿಯಮ್ ಎಕ್ಸ್' ನ ತಯಾರಿಕೆಯಲ್ಲಿ ತೊಡಗಿದ್ದಳು. ಅದೇ ಅವಳ ಕೊನೆಯ ಸಾಧನೆಯಾಯಿತು.

ವಿಕಿರಣಶೀಲ ವಸ್ತುವಾದ ರೇಡಿಯಂನ ಮೂವತ್ತು ವರ್ಷಗಳ ಸತತ ಸಂಪರ್ಕ ಅವಳನ್ನು ಸಾವಿನ ಅಂಚಿಗೆ ದೂಡಿತು. ತನ್ನ ಅರುವತ್ತಾರನೇ ವರ್ಷದಲ್ಲಿ 1934 ಜುಲೈ 4 ರಂದು ಮೇರಿ ನಿಧನಳಾದಳು. ತಾನು ಜನ್ಮ ಕೊಟ್ಟ ರೇಡಿಯಂಗೆ ಅವಳು ಬಲಿಯಾದಳು.

ಮೇರಿಯು ಮಾನವ ಸೇವೆಗೆಂದು ಮುಡಿಪಿಟ್ಟ ರೇಡಿಯಂನಿಂದ ಇಂದು ಮನುಕುಲಕ್ಕೆ ಕ್ಯಾನ್ಸರ್ ನಂತಹ ಮಾರಕ ರೋಗದ ಚಿಕಿತ್ಸೆ ಮಾಡಲು ಸಾಧ್ಯವಾಗಿದೆ.

## ಚಟುವಟಿಕೆಗಳು

**ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

1. ಮೇರಿ ಮತ್ತು ಅಕ್ಕ ಬ್ರೋನ್ಯ ಉನ್ನತ ವಿದ್ಯಾಭ್ಯಾಸ ಪಡೆಯಲು ಎಲ್ಲಿಗೆ ತೆರಳಿದರು?
2. ದಂಪತಿಗಳಿಬ್ಬರ ಒಮ್ಮತದ ಅಭಿಪ್ರಾಯವೇನಾಗಿತ್ತು?
3. ರೇಡಿಯಂನ ಪ್ರಯೋಜನವೇನು?
4. ಜನರು ದಂಪತಿಗಳನ್ನು ಅಭಿನಂದಿಸಿದುದು ಯಾಕೆ?

## ಗಾದೆ ವಿಸ್ತರಿಸಿ ಬರೆಯಿರಿ

- ತುಂಬಿದ ಕೊಡ ತುಳುಕುವುದಿಲ್ಲ

## ಪದ ವಿಂಗಡಿಸಿ ಬರೆಯಿರಿ

- ಮಕ್ಕಳಿಬ್ಬರೂ -
- ಅವಕಾಶವಿರಲಿಲ್ಲ -
- ಮಧ್ಯಾಹ್ನವಾದರೂ -
- ಅತ್ಯಮೂಲ್ಯ -

## ಶಬ್ದಕೋಶದ ಸಹಾಯದಿಂದ ಅರ್ಥ ಕಂಡುಹಿಡಿಯಿರಿ

- ದಿಟ್ಟ -
- ಏಕಾಗ್ರ ಚಿತ್ತ -
- ಜಗದ್ವಿಖ್ಯಾತಿ -
- ಒಮ್ಮತ -

## ವ್ಯಕ್ತಿ ಪರಿಚಯ ಬರೆಯಿರಿ

**ಭಾರತದ ಸ್ವಾತಂತ್ರ್ಯ ಹೋರಾಟಗಾರ, ಸ್ವತಂತ್ರ ಭಾರತದ ಮೊತ್ತಮೊದಲ ಪ್ರಧಾನಮಂತ್ರಿ ಜವಹರಲಾಲ್ ನೆಹರುರವರ ವ್ಯಕ್ತಿ ಪರಿಚಯವನ್ನು ಹಿಂದು ಮುಂದಾಗಿ ನೀಡಲಾಗಿದೆ. ಕ್ರಮೀಕರಿಸಿ ಬರೆಯಿರಿ.**

### ವ್ಯಕ್ತಿ ಪರಿಚಯ : ಜವಹರಲಾಲ್ ನೆಹರು

- ಜವಹರಲಾಲರಿಗೆ ಬಾಲ್ಯದಲ್ಲಿ ಫರ್ಡಿನೆಂಡ್ ಬ್ರುಕ್ಸ್ ಎಂಬವರು ಮನೆಗೆ ಬಂದು ಪಾಠ ಹೇಳಿಕೊಡುತ್ತಿದ್ದರು.
- ಜವಹರಲಾಲ್ ನೆಹರು 1889 ನವೆಂಬರ್ 14 ರಂದು ಜನಿಸಿದರು.
- 1916 ಫೆಬ್ರವರಿ 8 ರಂದು ನೆಹರೂರವರು ಕಮಲಾರನ್ನು ವಿವಾಹವಾದರು.
- 1910 ರಲ್ಲಿ ಪದವೀಧರರಾಗಿ, 1912 ರಲ್ಲಿ ಕಾನೂನು ಪರೀಕ್ಷೆಯಲ್ಲಿ ಪಾಸಾಗಿ ಭಾರತಕ್ಕೆ ಮರಳಿದರು.
- ಸ್ವಾತಂತ್ರ್ಯ ಹೋರಾಟದಲ್ಲಿ ನೆಹರೂರವರು ಹತ್ತು ವರ್ಷ ಏಳು ತಿಂಗಳು ಜೈಲು ಶಿಕ್ಷೆ ಅನುಭವಿಸಿದರು.
- ಸ್ವಾತಂತ್ರ್ಯ ಹೋರಾಟದಲ್ಲೂ ಸಮಾಜ ಸೇವೆಯಲ್ಲೂ ನೆಹರೂರವರೊಂದಿಗೆ ತೊಡಗಿಸಿಕೊಂಡ ಪತ್ನಿ ಕಮಲಾ ನೆಹರು 1936 ಫೆಬ್ರವರಿ 8 ರಂದು ಮರಣ ಹೊಂದಿದರು.
- 1955 ರಲ್ಲಿ ನೆಹರೂರವರಿಗೆ ಭಾರತರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು.
- 1907 ರ ವೇಳೆಗೆ ನೆಹರೂ ಕೇಂಬ್ರಿಡ್ಜ್‌ನ ಟ್ರಿನಿಟಿ ಕಾಲೇಜಿಗೆ ಸೇರಿದರು.
- 1964 ಮೇ 27 ರಂದು ನೆಹರೂರವರು ತೀರಿಕೊಂಡರು.
- ಸ್ವತಂತ್ರ ಭಾರತದ ಮೊತ್ತಮೊದಲ ಪ್ರಧಾನಿಯಾದರು.
- ನೆಹರೂರವರ ತಂದೆ ಮೋತಿಲಾಲ ನೆಹರು ತಾಯಿ ಸ್ವರೂಪರಾಣಿ.

## ವಿರೋಧಾರ್ಥ ಪದಗಳನ್ನು ಬರೆಯಿರಿ

ಕೆಳಗೆ ಕೊಟ್ಟಿರುವ ವೃತ್ತದಲ್ಲಿ ಪದಗಳು ಮತ್ತು ಅವುಗಳ ವಿರೋಧಾರ್ಥ ಪದಗಳನ್ನು ನೀಡಲಾಗಿದೆ. ಪದಗಳಿಗೆ ಸರಿಯಾದ ವಿರೋಧಾರ್ಥವನ್ನು ಕಂಡುಹಿಡಿದು ಬರೆಯಿರಿ.

ಅನುಭವ ನಂಬಿಕೆ ಆರೋಗ್ಯ

ಅಧೈರ್ಯ ಅವ್ಯವಸ್ಥೆ ಸಾಧ್ಯ ಅಸಂತೃಪ್ತ

ಲಭ್ಯ ಗೌರವ ಅಲಭ್ಯ ಜಯ ಸಂತೃಪ್ತ ಅಸಾಧ್ಯ

ಅಗೌರವ ಅಪಜಯ ವ್ಯವಸ್ಥೆ ಅನಾರೋಗ್ಯ ಧೈರ್ಯ

ಅಶಿಸ್ತು ಅನನುಭವ ಶಿಸ್ತು ಅಪನಂಬಿಕೆ

### ಈ ಕೆಳಗಿನ ಪದಗಳನ್ನು ಉಪಯೋಗಿಸಿ ಸ್ವಂತ ವಾಕ್ಯ ರಚಿಸಿರಿ

- ತೇರ್ಗಡೆ ಹೊಂದು -
- ಅಭಿನಂದಿಸು -
- ಬುದ್ಧಿವಂತ -

# ಕಲಿಕಾ ಕಣಜ



| ಕಲಿಕೋಪಕರಣಗಳು / ವೇದಿಕೆಗಳು | ಚಟುವಟಿಕೆಗಳು |
|---|---|
| ನೋಟು ಪುಸ್ತಕ | ಪ್ರವೇಶ ಚಟುವಟಿಕೆ, ಉತ್ತರಿಸಿರಿ, ಸೇವಾ ಸಂಘಟನೆಗಳನ್ನು ಹೆಸರಿಸಿರಿ, ಕ್ರಮೀಕರಿಸುವ, ವಿಂಗಡಿಸಿ ಬರೆಯಿರಿ, ಹಾಡಿರಿ, ಪ್ರಾಸಪದಗಳು, ಪಟ್ಟಿ ತಯಾರಿಸಿರಿ, ವರದಿ ಬರೆಯೋಣ, ವ್ಯಕ್ತಿ ಪರಿಚಯ, ಗಾದೆ ವಿಸ್ತರಿಸಿ ಬರೆಯಿರಿ, ಅರ್ಥ ಕಂಡುಹಿಡಿಯಿರಿ, ಸ್ವಂತವಾಕ್ಯ ರಚಿಸಿರಿ, ಅನುಕರಣ ವಾಚಕ, ಕವಿತೆಯ ಆಶಯ, ಘೋಷ ವಾಕ್ಯ, ಇಷ್ಟವಾದ ಸಾಲು |
| ಪಠ್ಯಪುಸ್ತಕ | ಪ್ರವೇಶ ಚಟುವಟಿಕೆ, ಸೇವಾ ಸಂಘಟನೆಗಳನ್ನು ಹೆಸರಿಸಿರಿ, ವಿಂಗಡಿಸಿ ಬರೆಯಿರಿ, ಘೋಷವಾಕ್ಯ, ಪಾಠಭಾಗದ ಓದು |
| ದೃಶ್ಯಶ್ರಾವ್ಯ ಮಾಧ್ಯಮ | ಲೇಖನ, ದೇಶಭಕ್ತಿ ಗೀತೆಗಳು, ಮಹಾತ್ಮರ ಕಥೆಗಳು |
| ಭಿತ್ತಿಪತ್ರಿಕೆ | ರಚನೆಗಳು |
| ಪೋರ್ಟ್ ಫೋಲಿಯೋ | ರಚನೆಗಳು |
| ಬಾಲಸಭೆ / ಶಾಲಾ ಎಸೆಂಬ್ಲಿ / ಸಿ.ಪಿ.ಟಿ.ಎ. | ದೇಶಭಕ್ತಿ ಗೀತೆ, ಮಹಾತ್ಮರ ಕಥೆಗಳು |

# ಪದಕೋಶ

## 5. ಬೆಳಕಿನೆಡೆಗೆ

| | | |
|---|---|---|
| ಅಗ್ನಿ | - | ಬೆಂಕಿ |
| ಇಕ್ಕುವುದು | - | ನೀಡುವುದು |
| ಜಾತ | - | ಹುಟ್ಟಿದ |
| ಜ್ಯೋತಿ | - | ಬೆಳಕು, ದೀಪ |
| ಬಚ್ಚಿಡು | - | ಅಡಗಿಸು |
| ಬಿನ್ನಾಣ | - | ವಿಶೇಷ ಜ್ಞಾನ, ಸೊಬಗು |
| ಬುತ್ತಿ | - | ದೂರದ ಪ್ರಯಾಣಕ್ಕೆ ಹೋಗುವಾಗ ಕಟ್ಟಿಕೊಂಡು ಹೋಗುವ ಆಹಾರ |
| ನನ್ನಿ | - | ಸತ್ಯ, ನಿಜ, ಪ್ರೀತಿ, |
| ಒಡೆಯ | - | ಯಜಮಾನ, ರಾಜ |
| ಕಳೆದು ಹೋಗು | - | ಕಾಣದಾಗು |
| ಡಂಗುರ ಸಾರಿಸು | - | ತಮಟೆ, ಡೋಲು ಮುಂತಾದವುಗಳನ್ನು ಹೊಡೆದುಕೊಂಡು ವಿಷಯವನ್ನು ಘೋಷಿಸುವುದು. |
| ತಿಜೋರಿ ಪೆಟ್ಟಿಗೆ | - | ಬೊಕ್ಕಸ, ಅಮೂಲ್ಯ ವಸ್ತುಗಳನ್ನು ಇಡುವ ಕಬ್ಬಿಣದ |
| ಬಹುಮಾನ | - | ಉಡುಗೊರೆ, ಪಾರಿತೋಷಕ |
| ಮರುಗು | - | ದುಃಖಪಡು |
| ಸರಕು | - | ಸಾಮಾನು, ಸಾಮಗ್ರಿ |
| ಅಕ್ರಮ | – | ಕ್ರಮವಲ್ಲದ್ದು |
| ಅಗಳಿ | - | ಚಿಲಕ |
| ಇರಿಸು | - | ಇಡು |

| | | |
|---|---|---|
| ಉಡುಗೊರೆ | - | ಬಹುಮಾನ |
| ಏಟು | - | ಪೆಟ್ಟು |
| ನಮಾಜ್ | - | ಪ್ರಾರ್ಥನೆ |
| ಚುನಾಯಿತನಾಗು | - | ಆರಿಸಲ್ಪಡು |
| ಪೊಟ್ಟಣ | - | ಕಾಗದ, ಎಲೆ ಮುಂತಾದವುಗಳಲ್ಲಿ ಯಾವುದಾದರೂ ವಸ್ತುಗಳನ್ನು ಕಟ್ಟಿದ್ದು. |
| ವಾಪಸು | - | ಮರಳಿ, ಹಿಂದಕ್ಕೆ |
| ವಿವೇಕ | - | ತಿಳುವಳಿಕೆ |
| ಸಂಕ್ಷಿಪ್ತ | - | ಚಿಕ್ಕದಾದುದು, ಕುಗ್ಗಿಸಲ್ಪಟ್ಟದ್ದು |
| ಸಾಂತ್ವನ | - | ಸಮಾಧಾನ |
| ಸ್ಥಿತಿ | - | ಅವಸ್ಥೆ |
| ಹವ್ಯಾಸ | - | ಆಸಕ್ತಿ, ಚಟ |
| ಹದೀಸ್ | - | 'ಖುರಾನ್' ನಲ್ಲಿ ಹೇಳಿದ ವಿಚಾರ |

## 6. ಆರೋಗ್ಯ ಸಿರಿ

| | | |
|---|---|---|
| ಅನುದಿನ | - | ದಿನಾಲೂ, ನಿತ್ಯವೂ |
| ಅಸ್ತಿತ್ವ | - | ಇರುವಿಕೆ |
| ಅರ್ಹತೆ | - | ಯೋಗ್ಯತೆ |
| ಉಂಡಾಡಿ | - | ಉಂಡು ತಿರುಗುವವನು, ಸೋಮಾರಿ |
| ಏಕಾಗ್ರತೆ | - | ತಲ್ಲೀನತೆ |
| ಕಣಿವೆ | - | ಎರಡು ಬೆಟ್ಟಗಳ ನಡುವಿನ ಇಕ್ಕಟ್ಟಾದ ಪ್ರದೇಶ |
| ಕರಿದ | - | ಎಣ್ಣೆಯಲ್ಲಿ ಹುರಿದ |
| ಕ್ರೀಡಾಪಟು | - | ಆಟಗಾರ |

| | | |
|---|---|---|
| ಕುಪ್ಪಳಿಸು | - | ಹಾರು, ಜಿಗಿ |
| ಕ್ಷಮತೆ | - | ಯೋಗ್ಯತೆ, ಶಕ್ತಿ |
| ಕ್ಷಿಪ್ರಗತಿ | - | ತ್ವರಿತಗತಿ |
| ಖಾಲಿ | - | ಬರಿದಾದ |
| ಖುಷಿ | - | ಸಂತೋಷ |
| ಗಳಿಸು | - | ಸಂಪಾದಿಸು |
| ಚಿಹ್ನೆ | - | ಗುರುತು, ಸಂಕೇತ |
| ಜಾಡ್ಯ | - | ರೋಗ |
| ಜೇಬು | - | ಕಿಸೆ |
| ತಪಾಸಣೆ | - | ವೈದ್ಯರ ಪರಿಶೋಧನೆ |
| ತುಂಟ | - | ತಂಟೆಕೋರ, ಚೇಷ್ಟೆಗಾರ |
| ತುಮುಲ | - | ಗೊಂದಲ |
| ತಿಕ್ಕು | - | ಉಜ್ಜು |
| ದಣಿವು | - | ಆಯಾಸ |
| ದಾಖಲೆ | - | ಆಧಾರವಾದ ಕಾಗದಪತ್ರ, ರುಜುವಾತು |
| ದಾಂಡು | - | ಉದ್ದವಾದ ಕೋಲು |
| ದೈನಂದಿನ | - | ದಿನನಿತ್ಯದ |
| ನೆಮ್ಮದಿ | - | ಸಮಾಧಾನ, ಶಾಂತಿ |
| ಪಂಜು | - | ದೀವಟಿಗೆ |
| ಪತಾಕೆ | - | ಬಾವುಟ |
| ಪಾರಾ ಅಥ್ಲೆಟ್ | - | ವಿಶೇಷಚೇತನ ಆಟಗಾರ |
| ಪ್ರೇರೇಪಿಸು | - | ಪ್ರಚೋದಿಸು |
| ಪೋರ | - | ಹುಡುಗ, ಬಾಲಕ |
| ಬಣ್ಣಿಸಲಸದಳ | - | ವರ್ಣಿಸಲು ಅಸಾಧ್ಯವಾದ |

| | | |
|---|---|---|
| ಬಯಸು | - | ಅಪೇಕ್ಷಿಸು |
| ಬಾಂಧವ್ಯ | - | ಸ್ನೇಹ, ಗೆಳೆತನ |
| ಬಿಡುವು | - | ವೇಳೆ |
| ಬಾಳು | - | ಜೀವನ |
| ಬಾಚುವುದು | - | ಗೋರುವುದು |
| ಬಿಗು | - | ಗಟ್ಟಿಯಾದ ಹಿಡಿತ |
| ಭೂತಕನ್ನಡಿ | - | ವಸ್ತುವನ್ನು ದೊಡ್ಡದಾಗಿ ತೋರಿಸುವ ಕನ್ನಡಿ |
| ಬೆಂಡು ಬತ್ತಾಸು | - | ಒಂದು ಬಗೆಯ ಸಿಹಿತಿಂಡಿ |
| ಮನದುಮ್ಮಳ | - | ದುಃಖ |
| ಮುದ | - | ಹಿಗ್ಗು, ಆನಂದ |
| ಮುಸುಕು | - | ಹೊದಿಕೆ, ಮುಚ್ಚು, ಆವರಣ |
| ಲಗ್ಗೆ ಚೆಂಡು | - | ಲಗೋರಿ, ಗುರಿ ಹಲಗೆಗೆ ಚೆಂಡನ್ನು ಎಸೆದು ಆಡುವ ಆಟ |
| ಲವಲವಿಕೆ | - | ಹುರುಪು, ಉತ್ಸಾಹ |
| ವಿಶ್ವ | - | ಜಗತ್ತು, ಲೋಕ |
| ಶತಮಾನ | - | ನೂರು ವರ್ಷಗಳ ಅವಧಿ |
| ಶಾರೀರಿಕ ಕ್ಷಮತೆ | - | ದೈಹಿಕ ಸಾಮರ್ಥ್ಯ |
| ಶೇಂಗಾ | - | ನೆಲಕಡಲೆ |
| ಪತಾಕೆ | - | ಬಾವುಟ |
| ಪಂಜು | - | ದೀವಟಿಗೆ, ದೊಂದಿ |
| ಶಿಲ್ಪಿ | - | ಮೂರ್ತಿಯನ್ನು ಕೆತ್ತುವವರು |
| ಮಂಕಾಗಿ | - | ಉತ್ಸಾಹವಿಲ್ಲದೆ |
| ಸಬಳ | - | ಕಬ್ಬಿಣದ ಉದ್ದದ ಹಾರೆಕೋಲು |
| ಹುಳುಕು | - | ಹುಳು ಹಿಡಿದ, ಹಾಳಾದ |

## 7. ದುಡಿಮೆಯ ಮಹತ್ವ

| | | |
|---|---|---|
| ಅಡ್ಡಿ | - | ತಡೆ |
| ಉತ್ತಮ | - | ಒಳ್ಳೆಯ |
| ಎಚ್ಚರವಹಿಸು | - | ಜಾಗರೂಕನಾಗಿರು |
| ಒಪ್ಪಿಗೆ | - | ಅನುಮತಿ |
| ಕರುಳ ಕುಡಿ | - | ಮಕ್ಕಳು (ಮಗು) |
| ಕಸುಬು | - | ಕೆಲಸ |
| ಕಾಡು | - | ಪೀಡಿಸು |
| ಖರೀದಿಸು | - | ಹಣಕೊಟ್ಟು ಕೊಂಡುಕೊಳ್ಳು |
| ಗಳಿಕೆ | - | ಸಂಪಾದನೆ |
| ಗೆರಸೆ | - | ಬಿದಿರಿನಿಂದ ತಯಾರಿಸಿದ ಅಗಲವಾದ ಚೌಕಾಕಾರದ ತಟ್ಟೆ |
| ಗಿರಾಕಿ | - | ಗ್ರಾಹಕ, ವಸ್ತುಗಳನ್ನು ಕೊಂಡುಕೊಳ್ಳುವವನು |
| ಜನಿಸು | - | ಹುಟ್ಟು, ಜನನ ಪಡೆಯು |
| ಜಾಣ್ಮೆ | - | ಬುದ್ಧಿವಂತಿಕೆ |
| ತರ | - | ವಿಧ |
| ತಣ್ಣೀರೆರಚು | - | ನಿರುತ್ಸಾಹಗೊಳಿಸು |
| ತೀರ್ಮಾನ | - | ನಿರ್ಧಾರ |
| ತೇರ್ಗಡೆ | - | ಉತ್ತೀರ್ಣ, ಗೆಲುವು |
| ದುಡ್ಡು | - | ಹಣ |
| ನಿಯತ್ತು | - | ಪ್ರಾಮಾಣಿಕತೆ |
| ನೆನೆಸು | - | ಒದ್ದೆಯಾಗಿಸು |

| | | |
|---|---|---|
| ಪ್ರಸ್ತಾಪಿಸು | - | ತಿಳಿಸು, ಸೂಚಿಸು, ವಿಷಯವನ್ನು ಉಲ್ಲೇಖಿಸು |
| ಪೀಳಿಗೆ | - | ವಂಶ, ತಲೆಮಾರು |
| ಬಳಸು | - | ಉಪಯೋಗಿಸು |
| ಬಾಳಿಕೆ | - | ಬಹುಕಾಲ ಉಪಯೋಗಕ್ಕೆ ಬರುವುದು |
| ಮಡದಿ | - | ಹೆಂಡತಿ, ಪತ್ನಿ |
| ವೆಚ್ಚ | - | ಖರ್ಚು, ವ್ಯಯ |
| ಸಿದ್ಧನಾಗು | - | ತಯಾರಾಗು, ಅಣಿಯಾಗು |
| ಹುರಿದುಂಬಿಸು | - | ಪ್ರೋತ್ಸಾಹಿಸು |

## 8. ನಾಡಿಗಾಗಿ

| | | |
|---|---|---|
| ಅಂಚು | - | ಕೊನೆ, ಬದಿ |
| ಅಪ್ಪಳಿಸು | - | ತಟ್ಟು |
| ಅಪೂರ್ವ | - | ಅಪರೂಪವಾದ |
| ಅಭಿನಂದಿಸು | - | ಪ್ರಶಂಸಿಸು |
| ಅಮೂಲ್ಯ | - | ಬೆಲೆಬಾಳುವ |
| ಅನಾರೋಗ್ಯ | - | ಆರೋಗ್ಯ ಇಲ್ಲದಿರುವುದು |
| ಅಸುನೀಗು | - | ತೀರಿಹೋಗು |
| ಆಗರ | - | ಆಶ್ರಯ |
| ಆಳ್ವಿಕೆ | - | ಆಡಳಿತೆ |
| ಇತಿಹಾಸ | - | ಚರಿತ್ರೆ |
| ಉನ್ನತ | - | ಹಿರಿಯ, ಎತ್ತರವಾದ |
| ಎಡರು ತೊಡರು | - | ಅಡ್ಡಿ, ಅಡಚಣೆ |
| ಏಕಾಗ್ರ ಚಿತ್ತ | - | ತಲ್ಲೀನನಾಗು |

| | | |
|---|---|---|
| ಒಮ್ಮತ | - | ಒಗ್ಗಟ್ಟು |
| ಒಳಿತು | - | ಒಳ್ಳೆಯದು |
| ಕಣ | - | ಸೂಕ್ಷ್ಮವಾದ ಅಂಶ |
| ಕಾಲುವೆ | - | ನೀರು ಹರಿಯಲು ಮಾಡಿದ ತಗ್ಗು ಮಾರ್ಗ, ಹಳ್ಳ |
| ಕಾಯ್ವ | - | ಕಾಯುವ, ರಕ್ಷಿಸುವ |
| ಕುಲ | - | ವಂಶ |
| ಖ್ಯಾತಿ | - | ಪ್ರಸಿದ್ಧಿ |
| ಚಳುವಳಿ | - | ಸಾಮೂಹಿಕ ಆಂದೋಲನ |
| ಚಿಕಿತ್ಸೆ | - | ರೋಗ ಗುಣಪಡಿಸುವ ಉಪಚಾರ |
| ಜನಾಂಗ | - | ಜನತೆ |
| ಜಾಡು | - | ಸುಳಿವು |
| ಜಾಣ್ಮೆ | - | ಜಾಣತನ, ಕೌಶಲ |
| ತಂಡ | - | ಗುಂಪು |
| ತೇರ್ಗಡೆ | - | ಜಯ, ಉತ್ತೀರ್ಣ |
| ತಂಗಾಳಿ | - | ತಣ್ಣನೆಯ ಗಾಳಿ |
| ತಲೆದೂಗು | - | ತೊನೆಯು, ಸಮ್ಮತಿಸು |
| ದಂಪತಿ | - | ಗಂಡಹೆಂಡತಿ |
| ದಿಟ್ಟ | - | ಧೈರ್ಯಶಾಲಿ |
| ದುರಂತ | - | ದುಃಖದಲ್ಲಿ ಕೊನೆಗೊಳ್ಳುವ |
| ನಿಧನ | - | ಮರಣ |
| ನಿರ್ಮಾಣ | - | ಸೃಷ್ಟಿ, ರಚನೆ |
| ನಿರ್ವಹಣೆ | - | ನಿಭಾಯಿಸುವುದು |
| ನಿಷ್ಠೆ | - | ಶ್ರದ್ಧೆ |
| ನೀಗಿಸು | - | ತೊಲಗಿಸು, ನಿಭಾಯಿಸು |

| | | |
|---|---|---|
| ಪಂಚೇಂದ್ರಿಯ | : | ಕಣ್ಣು, ಕಿವಿ, ಮೂಗು, ನಾಲಗೆ, ಚರ್ಮ |
| ಪದವಿ | - | ಹುದ್ದೆ |
| ಪತಿ | - | ಗಂಡ |
| ಪಾಡು | - | ರೀತಿ, ಹಾಡು |
| ಪಾಲ್ಗೊಳ್ಳು | - | ಭಾಗವಹಿಸು |
| ಪ್ರಾಮಾಣಿಕತೆ | - | ನಂಬಿಕೆಗೆ ಅರ್ಹವಾಗಿರುವಿಕೆ |
| ಪೈರು | - | ತೆನೆ ಕೊಡುವ |
| ಬಲಿಯಾಗು | - | ಆಹುತಿಯಾಗು |
| ಬಾಲಕ | - | ಹುಡುಗ |
| ಬಿಡುವು | - | ಅವಕಾಶ, ವಿಶ್ರಾಂತಿ |
| ಬುನಾದಿ | - | ತಳಪಾಯ |
| ಮನುಕುಲ | - | ಮನುಷ್ಯಕುಲ |
| ಮಹಾನ್ | - | ಶ್ರೇಷ್ಠ |
| ಮಾನವ | - | ಮನುಷ್ಯ |
| ಮಾರಕ | - | ಕೆಡುಕು ಉಂಟುಮಾಡುವ |
| ಮಾಹಿತಿ | - | ತಿಳಿವಳಿಕೆ |
| ಮಿತವ್ಯಯ | - | ಹಿಡಿತದಿಂದ ಖರ್ಚು ಮಾಡು |
| ಮುಡಿಪಾಗಿಡು | - | ಮೀಸಲಿರಿಸು |
| ಮುರುಕು | - | ಮುರಿದ |
| ರುಜು | - | ಸಹಿ |
| ರೂಪೀಕರಿಸು | - | ಯೋಜಿಸು |
| ಲಭ್ಯ | - | ದೊರಕಿದುದು, ಪಡೆಯಬಹುದಾದ |
| ವಸಾಹತು | - | ಪಾಳೆಯ, ಬೀಡು, ಕಾಲನಿ |
| ವ್ಯಕ್ತಿ | - | ಮನುಷ್ಯ |

| | | |
|---|---|---|
| ವ್ಯವಸ್ಥಿತ | - | ಅಚ್ಚುಕಟ್ಟಾದ |
| ವಿಕಿರಣಶೀಲ | - | ಚದುರುವ ಸ್ವಭಾವದ |
| ವಿವಾಹ | - | ಮದುವೆ |
| ಶಿಬಿರ | - | ತಾತ್ಕಾಲಿಕ ವಸತಿ |
| ಸತಿ | - | ಹೆಂಡತಿ |
| ಸತತ | - | ಅಡೆತಡೆಯಿಲ್ಲದೆ, ನಿರಂತರ |
| ಸಂದೇಶ | - | ಮಹಾತ್ಮರ ಹೇಳಿಕೆ |
| ಸಂಪರ್ಕ | - | ಸಂಬಂಧ |
| ಸಮಾವೇಶ | - | ಒಟ್ಟುಗೂಡುವಿಕೆ |
| ಸಮಾಲೋಚನೆ | - | ಆಲೋಚನೆ, ಪರಾಮರ್ಶೆ |
| ಸಂದೇಹ | - | ಸಂಶಯ, ಅನುಮಾನ |
| ಸಂತೃಪ್ತ | - | ತೃಪ್ತವಾದ |
| ಸದೃಢ | - | ಬಲಿಷ್ಠ |
| ಸ್ಫೂರ್ತಿ | - | ಪ್ರಚೋದನೆ, ಪ್ರೇರಣೆ |
| ಸ್ವಾಮ್ಯ | - | ಒಡೆತನ |
| ಸಹಭಾಗಿತ್ವ | - | ಸಮಾನ ಜವಾಬ್ದಾರಿ ಹೊಂದಿದ |

# ಕಾಗುಣಿತ ಅಕ್ಷರಗಳು

| | ್ | ಾ | ಿ | ೀ | ು | ೂ | ೃ | ೆ | ೇ | ೈ | ೊ | ೋ | ೌ | ಂ | ಃ |
|---|---|---|---|---|---|---|---|---|---|---|---|---|---|---|---|
| | **1** | **2** | **3** | **4** | **5** | **6** | **7** | **8** | **9** | **10** | **11** | **12** | **13** | **14** | **15** |
| **1** | ಅ | ಆ | ಇ | ಈ | ಉ | ಊ | ಋ | ಎ | ಏ | ಐ | ಒ | ಓ | ಔ | ಅಂ | ಅಃ |
| **2** | ಕ | ಕಾ | ಕಿ | ಕೀ | ಕು | ಕೂ | ಕೃ | ಕೆ | ಕೇ | ಕೈ | ಕೊ | ಕೋ | ಕೌ | ಕಂ | ಕಃ |
| **3** | ಖ | ಖಾ | ಖಿ | ಖೀ | ಖು | ಖೂ | ಖೃ | ಖೆ | ಖೇ | ಖೈ | ಖೊ | ಖೋ | ಖೌ | ಖಂ | ಖಃ |
| **4** | ಗ | ಗಾ | ಗಿ | ಗೀ | ಗು | ಗೂ | ಗೃ | ಗೆ | ಗೇ | ಗೈ | ಗೊ | ಗೋ | ಗೌ | ಗಂ | ಗಃ |
| **5** | ಘ | ಘಾ | ಘಿ | ಘೀ | ಘು | ಘೂ | ಘೃ | ಘೆ | ಘೇ | ಘೈ | ಘೊ | ಘೋ | ಘೌ | ಘಂ | ಘಃ |
| **6** | ಚ | ಚಾ | ಚಿ | ಚೀ | ಚು | ಚೂ | ಚೃ | ಚೆ | ಚೇ | ಚೈ | ಚೊ | ಚೋ | ಚೌ | ಚಂ | ಚಃ |
| **7** | ಛ | ಛಾ | ಛಿ | ಛೀ | ಛು | ಛೂ | ಛೃ | ಛೆ | ಛೇ | ಛೈ | ಛೊ | ಛೋ | ಛೌ | ಛಂ | ಛಃ |
| **8** | ಜ | ಜಾ | ಜಿ | ಜೀ | ಜು | ಜೂ | ಜೃ | ಜೆ | ಜೇ | ಜೈ | ಜೊ | ಜೋ | ಜೌ | ಜಂ | ಜಃ |
| **9** | ಝ | ಝಾ | ಝಿ | ಝೀ | ಝು | ಝೂ | ಝೃ | ಝೆ | ಝೇ | ಝೈ | ಝೊ | ಝೋ | ಝೌ | ಝಂ | ಝಃ |
| **10** | ಟ | ಟಾ | ಟಿ | ಟೀ | ಟು | ಟೂ | ಟೃ | ಟೆ | ಟೇ | ಟೈ | ಟೊ | ಟೋ | ಟೌ | ಟಂ | ಟಃ |
| **11** | ಠ | ಠಾ | ಠಿ | ಠೀ | ಠು | ಠೂ | ಠೃ | ಠೆ | ಠೇ | ಠೈ | ಠೊ | ಠೋ | ಠೌ | ಠಂ | ಠಃ |
| **12** | ಡ | ಡಾ | ಡಿ | ಡೀ | ಡು | ಡೂ | ಡೃ | ಡೆ | ಡೇ | ಡೈ | ಡೊ | ಡೋ | ಡೌ | ಡಂ | ಡಃ |
| **13** | ಢ | ಢಾ | ಢಿ | ಢೀ | ಢು | ಢೂ | ಢೃ | ಢೆ | ಢೇ | ಢೈ | ಢೊ | ಢೋ | ಢೌ | ಢಂ | ಢಃ |
| **14** | ಣ | ಣಾ | ಣಿ | ಣೀ | ಣು | ಣೂ | ಣೃ | ಣೆ | ಣೇ | ಣೈ | ಣೊ | ಣೋ | ಣೌ | ಣಂ | ಣಃ |
| **15** | ತ | ತಾ | ತಿ | ತೀ | ತು | ತೂ | ತೃ | ತೆ | ತೇ | ತೈ | ತೊ | ತೋ | ತೌ | ತಂ | ತಃ |
| **16** | ಥ | ಥಾ | ಥಿ | ಥೀ | ಥು | ಥೂ | ಥೃ | ಥೆ | ಥೇ | ಥೈ | ಥೊ | ಥೋ | ಥೌ | ಥಂ | ಥಃ |
| **17** | ದ | ದಾ | ದಿ | ದೀ | ದು | ದೂ | ದೃ | ದೆ | ದೇ | ದೈ | ದೊ | ದೋ | ದೌ | ದಂ | ದಃ |
| **18** | ಧ | ಧಾ | ಧಿ | ಧೀ | ಧು | ಧೂ | ಧೃ | ಧೆ | ಧೇ | ಧೈ | ಧೊ | ಧೋ | ಧೌ | ಧಂ | ಧಃ |
| **19** | ನ | ನಾ | ನಿ | ನೀ | ನು | ನೂ | ನೃ | ನೆ | ನೇ | ನೈ | ನೊ | ನೋ | ನೌ | ನಂ | ನಃ |
| **20** | ಪ | ಪಾ | ಪಿ | ಪೀ | ಪು | ಪೂ | ಪೃ | ಪೆ | ಪೇ | ಪೈ | ಪೊ | ಪೋ | ಪೌ | ಪಂ | ಪಃ |
| **21** | ಫ | ಫಾ | ಫಿ | ಫೀ | ಫು | ಫೂ | ಫೃ | ಫೆ | ಫೇ | ಫೈ | ಫೊ | ಫೋ | ಫೌ | ಫಂ | ಫಃ |
| **22** | ಬ | ಬಾ | ಬಿ | ಬೀ | ಬು | ಬೂ | ಬೃ | ಬೆ | ಬೇ | ಬೈ | ಬೊ | ಬೋ | ಬೌ | ಬಂ | ಬಃ |
| **23** | ಭ | ಭಾ | ಭಿ | ಭೀ | ಭು | ಭೂ | ಭೃ | ಭೆ | ಭೇ | ಭೈ | ಭೊ | ಭೋ | ಭೌ | ಭಂ | ಭಃ |
| **24** | ಮ | ಮಾ | ಮಿ | ಮೀ | ಮು | ಮೂ | ಮೃ | ಮೆ | ಮೇ | ಮೈ | ಮೊ | ಮೋ | ಮೌ | ಮಂ | ಮಃ |
| **25** | ಯ | ಯಾ | ಯಿ | ಯೀ | ಯು | ಯೂ | ಯೃ | ಯೆ | ಯೇ | ಯೈ | ಯೊ | ಯೋ | ಯೌ | ಯಂ | ಯಃ |
| **26** | ರ | ರಾ | ರಿ | ರೀ | ರು | ರೂ | ರೃ | ರೆ | ರೇ | ರೈ | ರೊ | ರೋ | ರೌ | ರಂ | ರಃ |
| **27** | ಲ | ಲಾ | ಲಿ | ಲೀ | ಲು | ಲೂ | ಲೃ | ಲೆ | ಲೇ | ಲೈ | ಲೊ | ಲೋ | ಲೌ | ಲಂ | ಲಃ |
| **28** | ವ | ವಾ | ವಿ | ವೀ | ವು | ವೂ | ವೃ | ವೆ | ವೇ | ವೈ | ವೊ | ವೋ | ವೌ | ವಂ | ವಃ |
| **29** | ಶ | ಶಾ | ಶಿ | ಶೀ | ಶು | ಶೂ | ಶೃ | ಶೆ | ಶೇ | ಶೈ | ಶೊ | ಶೋ | ಶೌ | ಶಂ | ಶಃ |
| **30** | ಷ | ಷಾ | ಷಿ | ಷೀ | ಷು | ಷೂ | ಷೃ | ಷೆ | ಷೇ | ಷೈ | ಷೊ | ಷೋ | ಷೌ | ಷಂ | ಷಃ |
| **31** | ಸ | ಸಾ | ಸಿ | ಸೀ | ಸು | ಸೂ | ಸೃ | ಸೆ | ಸೇ | ಸೈ | ಸೊ | ಸೋ | ಸೌ | ಸಂ | ಸಃ |
| **32** | ಹ | ಹಾ | ಹಿ | ಹೀ | ಹು | ಹೂ | ಹೃ | ಹೆ | ಹೇ | ಹೈ | ಹೊ | ಹೋ | ಹೌ | ಹಂ | ಹಃ |
| **33** | ಳ | ಳಾ | ಳಿ | ಳೀ | ಳು | ಳೂ | ಳೃ | ಳೆ | ಳೇ | ಳೈ | ಳೊ | ಳೋ | ಳೌ | ಳಂ | ಳಃ |

# ಭಾರತದ ಸಂವಿಧಾನ

ಭಾಗ IV ಕ

## ಕರ್ತವ್ಯಗಳು

51ಕ. **ಮೂಲಭೂತ ಕರ್ತವ್ಯಗಳು – ಈ ಕೆಳಗಿನವುಗಳು ಭಾರತದ ಪ್ರತಿಯೊಬ್ಬ ಪೌರನ ಕರ್ತವ್ಯಗಳಾಗಿವೆ.**

(ಕ) ಸಂವಿಧಾನವನ್ನು ಅನುಸರಿಸುವುದು, ಅದರ ಆದರ್ಶಗಳನ್ನು, ಸಂಸ್ಥೆಗಳನ್ನು ರಾಷ್ಟ್ರಧ್ವಜವನ್ನು ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು;

(ಖ) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಘೋಷಿಸುವುದು ಮತ್ತು ಅನುಸರಿಸುವುದು.

(ಗ) ಭಾರತದ ಸಾರ್ವಭೌಮತೆಯನ್ನು, ಏಕತೆಯನ್ನು ಮತ್ತು ಅಖಂಡತೆಯನ್ನು ಗೌರವಿಸುವುದು ಹಾಗೂ ಸಂರಕ್ಷಿಸುವುದು.

(ಘ) ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ ಅದನ್ನು ಅನುಸರಿಸುವುದು.

(ಙ) ಧಾರ್ಮಿಕ, ಭಾಷಿಕ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಗಳಿಂದ ಅತೀತವಾಗಿ ಭಾರತದ ಎಲ್ಲ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು, ಸ್ತ್ರೀಯರ ಗೌರವಕ್ಕೆ ಕುಂದುಂಟುಮಾಡುವ ಆಚರಣೆಯನ್ನು ಬಿಟ್ಟು ಬಿಡುವುದು.

(ಚ) ನಮ್ಮ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು.

(ಛ) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಅಭಿವೃದ್ಧಿ ಮಾಡುವುದು, ಪ್ರಾಣಿಗಳಿಗೆ ಅನುಕಂಪ ತೋರಿಸುವುದು.

(ಜ) ವೈಜ್ಞಾನಿಕ ಮನೋಭಾವ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣ ಪ್ರವೃತ್ತಿಯನ್ನು ಬೆಳೆಸುವುದು.

(ಝ) ಸಾರ್ವಜನಿಕ ಸೊತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು.

(ಞ) ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ಧಿಯ ಔನ್ನತ್ಯಕ್ಕೆ ತಲುಪಲು ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಯ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಪ್ರಾಮಾಣಿಕವಾಗಿ ಶ್ರಮಿಸುವುದು.

(ಟ) ಆರರಿಂದ ಹದಿನಾಲ್ಕು ವರ್ಷಗಳ ನಡುವಿನ ತನ್ನ ಮಕ್ಕಳಿಗೋ, ತನ್ನ ರಕ್ಷಣೆಯಲ್ಲಿರುವ ಮಕ್ಕಳಿಗೋ ಆಯಾ ಸಂದರ್ಭಾನುಸಾರ ಹೆತ್ತವರೋ ರಕ್ಷಕರೋ ವಿದ್ಯಾಭ್ಯಾಸಕ್ಕಿರುವ ಅವಕಾಶವನ್ನು ಏರ್ಪಡಿಸುವುದು.

# ಮಕ್ಕಳ ಹಕ್ಕುಗಳು

ಪ್ರೀತಿಯ ಮಕ್ಕಳೇ,

ನಿಮ್ಮ ಹಕ್ಕುಗಳ ಕುರಿತು ತಿಳಿಯಬೇಕಲ್ಲವೇ? ಹಕ್ಕುಗಳ ಕುರಿತಾಗಿರುವ ತಿಳುವಳಿಕೆಯು ನಿಮ್ಮ ಭಾಗವಹಿಸುವಿಕೆ, ಸಂರಕ್ಷಣೆ, ಸಾಮಾಜಿಕ ನ್ಯಾಯ ಎಂಬಿವುಗಳನ್ನು ಖಾತರಿಪಡಿಸಲು ಪ್ರೇರಣೆಯನ್ನೂ ಪ್ರಚೋದನೆಯನ್ನೂ ನೀಡುತ್ತದೆ. ನಿಮ್ಮ ಹಕ್ಕುಗಳನ್ನು ಸಂರಕ್ಷಿಸಲು ಈಗ ಒಂದು ಆಯೋಗವು ಕಾರ್ಯಾಚರಿಸುತ್ತಿದೆ. 'ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ' ಎಂದು ಅದರ ಹೆಸರು. ನಿಮ್ಮ ಹಕ್ಕುಗಳು ಯಾವುವು ಎಂದು ನೋಡೋಣ.

- ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ.
- ಜೀವ ಮತ್ತು ವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆ.
- ಪರಿಪೂರ್ಣವಾದ ಬದುಕು ಹಾಗೂ ವಿಕಾಸದ ಹಕ್ಕು.
- ಜಾತಿ, ಮತ, ವರ್ಗ, ವರ್ಣ ಎಂಬ ಚಿಂತನೆಗಳನ್ನು ಮೀರಿ ಗೌರವಿಸಲ್ಪಡುವ ಮತ್ತು ಅಂಗೀಕರಿಸಲ್ಪಡುವ ಹಕ್ಕು.
- ದೈಹಿಕ, ಮಾನಸಿಕ ಹಾಗೂ ಲೈಂಗಿಕ ದೌರ್ಜನ್ಯಗಳಿಂದ ರಕ್ಷಣೆ ಪಡೆಯಲೂ ಶುಶ್ರೂಷೆ ಪಡೆಯಲೂ ಇರುವ ಹಕ್ಕು.
- ಬಾಲ ಕಾರ್ಮಿಕತನದಿಂದ ಹಾಗೂ ಅಪಾಯಕಾರಿ ಕೆಲಸಗಳಿಂದ ಬಿಡುಗಡೆ.
- ಪಾಲ್ಗೊಳ್ಳುವಿಕೆಯ ಹಕ್ಕು.
- ಬಾಲ್ಯವಿವಾಹದಿಂದ ರಕ್ಷಣೆ.
- ವೈಯಕ್ತಿಕ ಸಂಸ್ಕೃತಿಯನ್ನು ಅರಿತುಕೊಂಡು ಅದನ್ನು ಅನುಸರಿಸಿ ಬದುಕುವ ಸ್ವಾತಂತ್ರ್ಯ.
- ನಿರ್ಲಕ್ಷ್ಯಕ್ಕೆ ಒಳಗಾಗದಂತೆ ಸಂರಕ್ಷಣೆ.
- ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಹಕ್ಕು.
- ಕಲಿಯಲೂ ಆಟವಾಡಲೂ ಇರುವ ಹಕ್ಕು.
- ಪ್ರೀತಿ ಹಾಗೂ ರಕ್ಷಣೆಯನ್ನು ಒದಗಿಸುವ ಕುಟುಂಬ ಹಾಗೂ ಸಮಾಜವನ್ನು ಪಡೆಯುವ ಹಕ್ಕು.

## ನಿಮ್ಮ ಕೆಲವು ಜವಾಬ್ದಾರಿಗಳು

- ಶಾಲೆ, ಸಾರ್ವಜನಿಕ ಸೊತ್ತುಗಳನ್ನು ಹಾನಿ ಮಾಡದೆ ರಕ್ಷಿಸುವುದು.
- ಶಾಲೆಯಲ್ಲಿ ಹಾಗೂ ಕಲಿಕಾ ಚಟುವಟಿಕೆಗಳಲ್ಲಿ ಶಿಸ್ತು ಪಾಲಿಸುವುದು.
- ಶಾಲಾ ಅಧಿಕಾರಿಗಳನ್ನು, ಅಧ್ಯಾಪಕರನ್ನು, ಹೆತ್ತವರನ್ನು ಹಾಗೂ ಸಹಪಾಠಿಗಳನ್ನು ಗೌರವಿಸುವುದು ಮತ್ತು ಅಂಗೀಕರಿಸುವುದು.
- ಜಾತಿ, ಮತ, ವರ್ಗ, ವರ್ಣ ಇತ್ಯಾದಿ ಚಿಂತನೆಗಳನ್ನು ಮೀರಿ ಇತರರನ್ನು ಗೌರವಿಸಲೂ ಅಂಗೀಕರಿಸಲೂ ಸಿದ್ಧರಾಗುವುದು.


**ಸಂಪರ್ಕಿಸಬೇಕಾದ ವಿಳಾಸ**

**ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ**

'ಶ್ರೀ ಗಣೇಶ್', ಟಿ.ಸಿ. 14/2036, ವಾನ್ ರೋಸ್ ಜಂಕ್ಷನ್, ತಿರುವನಂತಪುರ-34

ಫೋನ್ : 0471-2326603

E-mail : childrightscpcr@kerala.gov.in, rtecpcr@kerala.gov.in

Website : www.kescpcr.kerala.gov.in.


**ಮಕ್ಕಳ ಸಹಾಯವಾಣಿ : 1098, ಅಪರಾಧ ನಿಯಂತ್ರಣ : 1090, ನಿರ್ಭಯ : 1800 425 1400**

ಕೇರಳ ಪೋಲೀಸ್ ಸಹಾಯವಾಣಿ : 0471-3243000/44000/45000

Online R.T.E Monitoring : www.nireekshana.org.in